# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.



1,10,000+
Digital E-PAPER READERS

No.1 HAMPI TIMES LEADING PRINT & DIGITAL District News Paper

Contact for Advertisements: 9448633038



ಸಂಪುಟ:02 • ಸಂಚಿಕೆ: 217 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 02.03.2025 • ಭಾನುವಾರ • ಪುಟ:04 • ಬೆಲೆ:2

Volume:02 • Issue: 217 • PRGI No:KARKAN/2023/88055 • VIJAYANAGARA • 02.03.2025 • Sunday • Page:04 • Rs:2


# ಹಂಪಿ ಗಂಡುಮೆಟ್ಟಿದ ನೆಲ

## ಸಚಿವ.ಎಚ್.ಕೆ.ಪಾಟೀಲ್ ಹೇಳಿಕೆ | ಪ್ರತಿ ಕಲ್ಲು ಇತಿಹಾಸವನ್ನ ಮೌನದಿ ಸಾರುತ್ತವೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿಯ ಪ್ರತಿಯೊಂದು ಕಲ್ಲು ಇತಿಹಾಸ ಹೇಳುತ್ತದೆ. ಇದಕ್ಕೆ ಇತಿಹಾಸಕಾರು ಹಾಗೂ ಜಗತ್ತೆ ಹೊಗಳುತ್ತದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್. ಕೆ. ಪಾಟೀಲ್ ಹೇಳಿದರು.

ಅವರು ಶನಿವಾರ ಎಂ. ಪಿ. ಪ್ರಕಾಶ್ ವೇದಿಕೆಯಲ್ಲಿ ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ. ಪ್ರವಾಸೋದ್ಯಮ ಇಲಾಖೆ ಹಾಗೂ ಜಿಲ್ಲಾಡಳಿತ ವಿಜಯನಗರ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಹಂಪಿ ಉತ್ಸವ– 2025 ರ ಎರಡನೇ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಹಂಪಿ ಮನರಂಜನೆಯ ಸ್ಥಳ ಅಲ್ಲ. ಹೆಮ್ಮೆಯ ಸ್ಥಳ ಇದರ ವಾರಸುದಾರರು ನಾವು. ಸರ್ವರನ್ನು ಒಳಗೊಂಡ ವಿಜಯನಗರ ಸಾಮ್ರಾಜ್ಯವಾಗಿತ್ತು. ಹಂಪಿ ಗಂಡುಮೆಟ್ಟಿದ ಸ್ಥಳವಾಗಿದ್ದು ನಾವೆಲ್ಲರೂ ಈ ಉತ್ಸವವನ್ನು ಅಭಿಮಾನದಿಂದ ಆಚರಣೆ ಮಾಡುತ್ತಿದ್ದೆವೆ. ಸಿದ್ರಾಮಯ್ಯನವರ ವಿಶೇಷ ಪ್ರೇರಣೆ ಬೆಂಬಲ ಇದಕ್ಕೆ ಇದೆ. ಈ ಉತ್ಸವ ಬಂದಾಗ ಎಂ.ಪಿ. ಪ್ರಕಾಶ ಅವರ ನೆನಪು ಹಾರುವದಿಲ್ಲ. ಹಂಪಿ ನಮ್ಮದು ನಮ್ಮ ಹೆಮ್ಮೆ ಎಂದರು.

25 ಸಾವಿರ ಸ್ಮಾರಕಗಳು ನಮ್ಮ ರಾಜ್ಯದಲ್ಲಿವೆ ಎಂದು ಗರ್ವದಿಂದ ಹೇಳುತ್ತೆವೆ. ಕರ್ನಾಟಕದಲ್ಲಿ ಸ್ಮಾರಕಗಳನ್ನು >>4

# ಹಂಪಿ ಉತ್ಸವದ ಚಿತ್ರಾವಳಿ













# ಉತ್ತರ ಕರ್ನಾಟಕದ ಜವಾರಿ ಹೈದ ಬಾಳು ಬೆಳಗುಂದಿ ಗಾಯನಕ್ಕೆ ಕುಣಿದ ಪ್ರೇಕ್ಷಕರು



ಹಂಪಿ ಉತ್ಸವದ ಎರಡನೇ ದಿನ ಎಂಪಿ ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಬಾಳು ಬೆಳಗುಂದಿ ಗಾಯನ

# ಮದಗಜಗಳಂತೆ ಕಾದಾಡಿದ ಪೈಲ್ವಾನರು

## ಮುಧೋಳ ತಿಮ್ಮನಗೌಡರಿಗೆ ಹಂಪಿ ಕಂಠೀರವ–ಬೆಳಗಾವಿ ಪರಮಾನಂದಗೆ ಹಂಪಿ ಕೇಸರಿ ಪ್ರಶಸ್ತಿ

## ವಿಜಯನಗರದಲ್ಲಿ ಗ್ರಾಮೀಣ ಕ್ರೀಡೆ ಕುಸ್ತಿಗೆ ಉತ್ತೇಜನ ಎಂದ ಶಾಸಕ ಎಚ್.ಆರ್.ಗವಿಯಪ್ಪ.



■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಅಂಗಳದ ಮಲಪನಗುಡಿ ಗ್ರಾಮದಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಕುಸ್ತಿ ಪಂದ್ಯಾವಳಿಗಳು ನೆರದಿದ್ದ ಕುಸ್ತಿ ಪ್ರಿಯರಿಗೆ ಮೈನವಿರೇಳುವ ಪ್ರದರ್ಶನ ನೀಡಿದವು.

ಹಂಪಿ ಉತ್ಸವದಲ್ಲಿ ಜಿಲ್ಲಾಡಳಿತ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಹೊಸಮಲಪನಗುಡಿಯ ಶ್ರೀವಿಜಯವಿದ್ಯಾರಣ್ಯ ಪ್ರೌಢಶಾಲೆ ಮೈದಾನದಲ್ಲಿ ಏರ್ಪಡಿಸಿದ್ದ ಕುಸ್ತಿ ಪಂದ್ಯವಾಳಿಗಳಿಗೆ ಶಾಸಕ ಹೆಚ್.ಆರ್.ಗವಿಯಪ್ಪ ಶನಿವಾರ ಚಾಲನೆ ನೀಡಿ ಮಾತನಾಡಿ, ಗತವೈಭವದ ಇತಿಹಾಸ ಸಾರುವ ವಿಜಯನಗರ ಸಾಮ್ರಾಜ್ಯದಲ್ಲಿಯು ಸಹ ಕುಸ್ತಿಗೆ ವಿಶೇಷ ಪ್ರಾಮುಖ್ಯತೆಯನ್ನು ನೀಡಲಾಗಿತ್ತು. ಹಾಗಾಗೀ ಈಗೀನ ವಿಶ್ವವಿಖ್ಯಾತ ಹಂಪಿಯಲ್ಲಿ ಜರುಗುವ ಉತ್ಸವದಲ್ಲಿಯು ಸಹ ಕುಸ್ತಿ ಪಂದ್ಯಾವಳಿಗಳನ್ನು ಆಯೋಜಿಸುವ ಮೂಲಕ ಯುವಕರನ್ನು, ಕುಸ್ತಿಪಟುಗಳನ್ನು ಗುರುತಿಸುವ ಮೂಲಕ ಗ್ರಾಮೀಣ ಕ್ರೀಡೆ ಕುಸ್ತಿಗೆ ಉತ್ತೇಜನ ನೀಡಲಾಗುತ್ತಿದೆ ಎಂದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಮಾತನಾಡಿ, ಹಂಪಿ ಉತ್ಸವದಲ್ಲಿ ರಾಜ್ಯ ಮಟ್ಟದ ಕುಸ್ತಿಪಟುಗಳು ಮತ್ತು ಮಹಿಳಾ ಕುಸ್ತಿ ಪಟುಗಳನ್ನು ಆಹ್ವಾನಿಸಿ ಕುಸ್ತಿ ಪ್ರದರ್ಶನ ನೀಡುವ ಮೂಲಕ ಸ್ಥಳೀಯ ಕುಸ್ತಿಪಟುಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಕುಸ್ತಿ ಪ್ರಿಯರು ಈ ಭಾಗದಲ್ಲಿ ಹೆಚ್ಚಿರುವ ಹಿನ್ನಲೆಯಲ್ಲಿ ಗ್ರಾಮೀಣ ಕ್ರೀಡೆಗಳಿಗೆ ಆದ್ಯತೆ ನೀಡಿ ಆಯೋಜಿಸಲಾಗಿದೆ ಎಂದರು.

ಈ ವೇಳೆ ಹೂವಿನಹಡಗಲಿ ಶಾಸಕ ಕೃಷ್ಣನಾಯ್ಕ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೊಂಗ್ಜಾಯ್ ಅಕ್ರಮ್ ಅಲಿ ಷಾ, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ, ಹಂಪಿ ಉತ್ಸವ ಕ್ರೀಡಾ ಸಮಿತಿ ಅಧ್ಯಕ್ಷರಾದ ಉಮೇಶ್ ಮೈನಳ್ಳಿ, ಸಂಚಾಲಕ ಯು.ಅಶೋಕ, ನಿರ್ಣಾಯಕರಾದ ಬೀರಲಿಂಗಪ್ಪ, ವೆಂಕಟರಮಣ, ದುರುಗೋಜಿ, ಸೇರಿದಂತೆ ಎಲ್.ವಿಜಯಕುಮಾರಿ, ಸೋಮಕ್ಕ, ಕಾಳಮ್ಮ, ಪದ್ಮಾವತಿ, ಶ್ರೀಲತಾ ಇದ್ದರು.

### ಕುಸ್ತಿಯಲ್ಲಿ ಪ್ರಶಸ್ತಿ ವಿಜೇತರು

ರಾಜ್ಯ ಮಟ್ಟದ ಪುರುಷರ ಕುಸ್ತಿ ವಿಭಾಗದಲ್ಲಿ ಹಂಪಿ ಕಂಠೀರವ ಪ್ರಶಸ್ತಿಯು ಪ್ರಥಮ ಸ್ಥಾನ ಪಡೆದ ಮುಧೋಳ ತಿಮ್ಮನಗೌಡರಿಗೆ ದಕ್ಕಿದೆ. ಧಾರವಾಡದ ಭೀಮು ಕಾಟೆ (ದ್ವಿತೀಯ), ಹಂಪಿ ಕೇಸರಿಯಲ್ಲಿ ಬೆಳಗಾವಿ ಪರಮಾನಂದ (ಪ್ರಥಮ), ಧಾರವಾಡ ಪ್ರವೀಣ್ (ದ್ವಿತೀಯ), ಹಂಪಿ ಕುಮಾರ ವಿಭಾಗದಲ್ಲಿ ಬೆಳಗಾವಿ ಸುನಿಲ್ ಮೇತ್ರಿ (ಪ್ರಥಮ), ದಾವಣಗೆರೆ ಯೋಗೇಶ್ (ದ್ವಿತೀಯ) ಹಾಗೂ ಹಂಪಿ ಕಿಶೋರ ಪ್ರಶಸ್ತಿಯಲ್ಲಿ ದಾವಣಗೆರೆ ಸತ್ಯರಾಜ (ಪ್ರಥಮ), ಕೆ.ಮಂಜುನಾಥ (ದ್ವಿತೀಯ) ಸ್ಥಾನ ಪಡೆದಿದ್ದಾರೆ.

ರಾಜ್ಯಮಟ್ಟದ ಮಹಿಳಾ ಕುಸ್ತಿ ಪಂದ್ಯಾವಳಿಯಲ್ಲಿ ಹಂಪಿ ಕಂಠೀರವ ಪ್ರಶಸ್ತಿಯು ಹಳಿಯಾಳ ಮನಿಷಾ ಮುಡಿಗೇರಿದೆ. ಹಳಿಯಾಳ ಪ್ರತಿಕ್ಷಾ (ದ್ವಿತೀಯ), ಹಂಪಿ ಕೇಸರಿ ಪಟ್ಟದಲ್ಲಿ ಬಾಗಲಕೋಟೆ ಐಶ್ವರ್ಯ (ಪ್ರಥಮ), ಹಳಿಯಾಳ ಕಾವೇರಿ (ದ್ವಿತೀಯ), ಹಂಪಿ ಕುಮಾರಿಯಾಗಿ ಹಳಿಯಾಳ ಕಾವ್ಯ (ಪ್ರಥಮ), ಬಾಗಲಕೋಟೆ ಸೋನಿಯಾ (ದ್ವಿತೀಯ), >>3




## ಸ್ಟುಡೆಂಟ್ ಕಾಲಂ

# ಸಾಧನೆಗೆ ಬಡತನ ಅಡ್ಡಿಯಾಗಲ್ಲ



ಏಣಗಿ ಬಸಾಪುರ ಎಂಬ ಹಳ್ಳಿಯಲ್ಲಿ ಒಂದು ಸುಂದರವಾದ ಕುಟುಂಬದಲ್ಲಿ ನಾಲ್ಕು ಜನ ಹೆಣ್ಣು ಮಕ್ಕಳು. ಅವರ ತಂದೆ ಕುರಿ ಕಾಯುತ್ತಿದ್ದರು ಮತ್ತು ಅವರ ತಾಯಿ ಬೇರೆಯವರ ಹೊಲಕ್ಕೆ ಹೋಗಿ ಕೂಲಿ ಕೆಲಸ ಮಾಡುತ್ತಿದ್ದಳು ಅವರು ಸ್ವಂತ ದುಡಿಮೆಯಲ್ಲಿ ಇಬ್ಬರ ಮಕ್ಕಳ ಮದುವೆ ಮಾಡಿದರು ಹಾಗೂ ಇಬ್ಬರನ್ನು ಓದಿಸುತ್ತಿದ್ದರು ಶಿಲ್ಪಾ ಬಿ.ಎ ಓದುತ್ತಿದ್ದಳು, ಸಂಪದ 9ನೇ ತರಗತಿ ಓದುತ್ತಿದ್ದಳು. ಸಂಪದ ಬಹಳ ಚೂಟಿಯಾದ ಹುಡುಗಿಯಾಗಿದ್ದಳು. ಅರಳು ಉರಿದಂತೆ ಚೆನ್ನಾಗಿ ಮಾತನಾಡುತ್ತಿದ್ದಳು.

ಶಾಲೆಯಲ್ಲಿ ಗುರುಗಳು ಇವಳು ಮಾತನಾಡುವುದನ್ನು ಕಂಡು ಮೂಕ ವಿಸ್ಮಿತರಾಗುತ್ತಿದ್ದರು. ರಾಧಳಿಗೆ ಮುಂದೆ ಓದಿ ಒಂದು, ಉನ್ನತ ಶಿಕ್ಷಣ ಪಡಿಬೇಕೆಂಬ ಆಸೆ ಇತ್ತು ಹಾಗೆಯೇ ಅವಳ ತಂದೆ ತಾಯರಿಗೂ ಕೂಡ ಅವಳನ್ನು ಓದಿಸಬೇಕೆಂಬ ಆಸೆ ಇತ್ತು ಹಾಗೂ ಅವಳ ಅಕ್ಕಂದಿರಿಗೂ ಕೂಡ ಅವಳನ್ನು ಒಂದು ಉನ್ನತ ಶಿಕ್ಷಣದಲ್ಲಿ ನೋಡಬೇಕೆಂಬ ಹಂಬಲ ಬಹಳ ಇತ್ತು. ಅವಳಿಗೆ ಒಂದು ದಿನ ಅವಳ ತಂದೆ ತಾಯಿ ಹೇಳಿದ ಮಾತು ನೆನಪಾಗುತ್ತದೆ. ನಿನ್ನ ಜೀವನದಲ್ಲಿ ಮುಂದುವರಿಯ ಬೇಕಿದ್ದರೆ ಎಂತಹ ಕಷ್ಟಗಳು ಎದುರಿಸಿ ನಿಲ್ಲುವಂತಹ ಧೈರ್ಯ ನಿನ್ನಲ್ಲಿ ಇರಬೇಕು. ನಮಗೆ ಎಷ್ಟೇ ಕಷ್ಟವಾದರೆ ನಿನಗೆ ಓದಿಸುತ್ತೇವೆ ಅಂದಿದ್ದರು. ಅವಳು ಅವರ ತಂದೆ ತಾಯಿ ಹೇಳಿದಂತಹ ಮಾತನ್ನು ತಲೆಯಲ್ಲಿ ಇಟ್ಟುಕೊಂಡು ಚೆನ್ನಾಗಿ ಓದುತ್ತಿರುತ್ತಾಳೆ. ಅವಳಿಗೆ ಒಂದು ಕನಸು ಅದು ಏನೆಂದರೆ, ಲಾಯರ್ ಆಗಬೇಕೆಂಬ ಆಸೆ ಇತ್ತು. ಒಂದು ದಿನ ಅವಳನ್ನು ತಂದೆ-ತಾಯಿ ಬಡತನ ವಿದ್ದ ಕಾರಣ ಅವಳ ಅಕ್ಕನೂರಿಗೆ LLB ಓದಲು ಕಳಿಸುತ್ತಾರೆ. ಅಲ್ಲಿ ಅವಳ ಅಕ್ಕ ಮತ್ತು ಭಾವನ ಸಹಾಯದಿಂದ ಚೆನ್ನಾಗಿ ಓದ ತೊಡಗಿದಳು ಕಾಲೇಜಿನ ಖರ್ಚಿಗಾಗಿ ಪಾರ್ಟ್ ಟೈಮ್ ಕೆಲಸಕ್ಕೂ ಸೇರಿಕೊಂಡಳು. ಕಾಲೇಜಿನ ಗ್ರಂಥಾಲಯದ ಪುಸ್ತಕಗಳನ್ನು ಓದಿ ಅವಳು LLB ಯನ್ನು ಫಸ್ಟ್ ಕ್ಲಾಸ್ ನಲ್ಲಿ ಪಾಸ್ ಮಾಡಿದಳು.

ಆ ದಿನದಿಂದ ಅವಳ ಕನಸು ನನಸು ಮಾಡುತ್ತಾಳೆ ಹಾಗೆಯೇ ನಿಮ್ಮ ತಂದೆ ತಾಯಿಗೆ ನಿಮ್ಮ ಗುರಿಗಳನ್ನು ನೋಡಬೇಕೆನ್ನುವ ಹಂಬಲ ಮತ್ತು ಅವರು ನಮಗೋಸ್ಕರ ಬಿಸಿಲು ಮಳೆ ನೆರಳು ಎನ್ನದೆ ದುಡಿಯುತ್ತಾರೆ. ನಾವು ಅನುಭವಿಸುತ್ತಿರುವ ಕಷ್ಟ ನಮ್ಮ ಮಕ್ಕಳ ಅನುಭವಿಸಬಾರದು ಎಂದು ನಮ್ಮನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ನಾವು ಚೆನ್ನಾಗಿ ಓದುವುದರ ಬದಲು ಅಡ್ಡ ದಾರಿ ಹಿಡಿದು ಫೇಲ್ ಆಗಿ ಬಂದರೆ ನೊಂದ ಬಡಜೀವಗಳಿಗೆ ಎಷ್ಟು ನೋವಾಗಬೇಡ.ಯೋಚಿಸಿ ಸ್ನೇಹಿತರೆ!

ಅದಕ್ಕೆ ನಾವು ಚೆನ್ನಾಗಿ ಓದಬೇಕು ಮತ್ತು ತಂದೆ ತಾಯಿಯರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ನಾವು ಅವರ ಬೆವರು ಮತ್ತು ಪರಿಶ್ರಮವು ನಮ್ಮ ಯಶಸ್ವಿಗೆ ಕಾರಣವಾಗಿರುತ್ತದೆ. ಅದಕ್ಕೆ ನಾವು ಅವರ ಕಷ್ಟಗಳನ್ನು ಅರಿತು ಚೆನ್ನಾಗಿ ಓದಬೇಕು ಗುರಿ ಮುಟ್ಟಬೇಕು "ಈಸಬೇಕು ಇದ್ದು ಜಯಿಸಬೇಕು"

**– ಎಸ್. ಅನು, 9ನೇ ತರಗತಿ**
ಸರಕಾರಿ ಪ್ರೌಢಶಾಲೆ ಬ್ಯಾಸಿಗಿ ದಿರಿ ಹಗರಿಬೊಮ್ಮನಹಳ್ಳಿ ತಾಲೂಕು

## ನಿಮ್ಮ ಮಕ್ಕಳು ಅರಸರಾಗಬೇಕೆ?

**ಕನ್ನಡ ದಿನಪತ್ರಿಕೆ, ಪುಸ್ತಕಗಳನ್ನು ಮಕ್ಕಳ ಕೈಯಲ್ಲಿಡಿ. ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**-: ಸಂಪಾದಕರು :-**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಮನುಕುಲ ಕಂಡ ಮಹಾಮೇಳ ಮಹಾಕುಂಭ..!

1.4 ಲಕ್ಷ ಕುಟೀರಗಳ ಬೃಹತ್ ತಾತ್ಕಾಲಿಕ ನಗರ..! ಅಂದುಕೊಂಡಿದ್ದ 40 ಕೋಟಿ ಭಕ್ತರ ಆಗಮನದ ನಿರೀಕ್ಷೆಯಲ್ಲಿದ್ದ ಪ್ರಯಾಗಕ್ಕೆ ಹರಿದು ಬಂದ ಜನ ಸಾಗರ 60 ಕೋಟಿಗೂ ಅಧಿಕ..! ಭಾರತದ ಮೂರನೇ ಒಂದು ಭಾಗ, ಅಂದರೆ ಇದು ಕೇವಲ ಮಹಾಕುಂಭವಲ್ಲ ಭಕ್ತಜನರ ಮಹಾಪ್ರವಾಹ. ಆಗೀಗ ನಡೆಯುವಂತಹ ಕುಂಭಮೇಳಕ್ಕೂ, ಈಗ ನಾವು ಕಣ್ತುಂಬಿಕೊಂಡ ಮಹಾಕುಂಭ ಮೇಳಕ್ಕೂ ಇರುವ ಮಹತ್ವದ ವ್ಯತ್ಯಾಸವೆಂದರೆ, ಈ ಬಾರಿ ನಾವು ನೀವೆಲ್ಲ ಕಣ್ತುಂಬಿಕೊಂಡಿದ್ದು 144 ವರ್ಷಗಳ ನಂತರ ಪುನರಾವರ್ತನೆಯಾಗುತ್ತಿರುವ ಕುಂಭ, ಇದೊಂದು ಧಾರ್ಮಿಕ ಸಂಕ್ರಮಣದ ಮೇಳವಾಗಿ ನಮ್ಮಗಳ ಹೃದಯವನ್ನು ಆವರಿಸಿಕೊಂಡ ಪರಿಯಂತೂ ಎಂದೂ ಮರೆಯದ ಸಂಭ್ರಮ. ಜಗತ್ತಿನ ಸರಿಸುಮಾರು ನೂರೈವತ್ತು ಕೋಟಿ ಜನ ಇದನ್ನು ವೀಕ್ಷಿಸಲಿದ್ದಾರೆಂದು ಅಂದಾಜಿಸಿದ್ದ ಎಲ್ಲಾ ಮೀಡಿಯಾಗಳ ಭವಿಷ್ಯ ಸುಳ್ಳಾಗಿದ್ದು ಜಗತ್ತಿನಾದ್ಯಂತ 300 ಕೋಟಿ ಜನ ಈ ಸಂಭ್ರಮವನ್ನು ತಮ್ಮ ಮನಪಟಲದಲ್ಲಿ ಹಚ್ಚಳಿಯದಂತೆ ಮುದ್ರಿಸಿಕೊಂಡರಲ್ಲದೆ ಭಕ್ತಿಯ ಸಾಗರದಲ್ಲಿ ಮುಳಿಗೆದ್ದರು ಎಂದರೆ ಅತಿಶಯೋಕ್ತಿಯಲ್ಲ. ಪ್ರತೀ ದಿನದಲ್ಲಿ ಸುಮಾರು 1 ರಿಂದ 2 ಕೋಟಿ ಜನರು ನೇರವಾಗಿ ಕುಂಭದಲ್ಲಿ ಭಾಗವಹಿಸಿ ಪುನೀತರಾಗಿದ್ದಾರೆ. ಈ ಕಾರಣದಿಂದಾಗಿ ಇದು ಸಧ್ಯದ ಪ್ರಪಂಚದ ಮಹಾಮೇಳಗಳಲ್ಲಿ "ನ ಭೂತೋ ನ ಭವಿಷ್ಯತ್" ಎನ್ನುವಂತಹ ಮಹಾಮೇಳವಾಗಿ ದೇಶವಾಸಿಗಳ ಮನತುಂಬಿಕೊಂಡಿತು. ಇಂತಹ ಸನ್ನಿವೇಶದಲ್ಲಿರುವ ನಾವೇ ಧನ್ಯರು, ಏಕೆಂದರೆ ಈ ಹಿಂದಿನ ಹಲವು ತಲೆಮಾರುಗಳಿಗೆ ದಕ್ಕದ, ಮುಂದೆ ಬರಲಿರುವ ಎರಡು ಮೂರು ಹೊಸ ತಲೆಮಾರಿಗೂ ಸಿಗದಂತಹ ಸಂಕ್ರಮಣ ಕಾಲದ ಮಹಾಕುಂಭ ಇದು. ಕಳೆದ ಹನ್ನೆರಡು ಪೂರ್ಣ ಕುಂಭಗಳ ಸಂಕ್ರಮಣದ ರೂಪದಲ್ಲಿ ಈ ಮಹಾಕುಂಭ ವನ್ನು ಆಚರಿಸಲಾಯಿತು.

ಜನ ಮರುಳೊ... ಜಾತ್ರೆ ಮರಳೊ... ಎನ್ನುವವರ ಲಾಜಿಕ್ ಇಲ್ಲದ ಸಾಮಾನ್ಯರ ಪ್ರಶ್ನೆಗಳೆಂದರೆ, ಈ ಕುಂಭಗಳು ಎಂದರೇನು? ಈ ಕುಂಭಗಳಿಗೆ ಏಕಿಷ್ಟು ಮಹತ್ವ..? ಇಂತಹ ಸಮಯದಲ್ಲಿ ಒಂದೇ ಒಂದು ಬಾರಿ ನೀರಿನಲ್ಲಿ ಮುಳಿಗೆದ್ದರೆ, ಶಾಹಿ ಸ್ನಾನ ಮಾಡಿದರೆ, ನಾವು ಮಾಡಿದ ಪಾಪ ಕಳೆದು ಹೋಗುತ್ತದೆಯೇ? ನಮ್ಮ ಆತ್ಮ ಮುಕ್ತಿ ಹೊಂದುತ್ತದೆಯೇ? ಒಟ್ಟಾರೆಯಾಗಿ ನಮ್ಮ ಜೀವವನ್ನೇ ಬದಲಾಯಿಸಿ ಬಿಡುತ್ತದಾ..? ಎನ್ನುವವರಿಗೆ ಈ ಮಹಾಕುಂಭಮೇಳ ಒಂದು ಉತ್ತರ. ಹೌದು.. ವಿಶ್ವದಲ್ಲಿ ನೆಡೆಯುವ ಪ್ರತಿಯೊಂದೂ ಘಟನೆಯ ಹಿಂದೆ ಒಂದು ವೈಜ್ಞಾನಿಕ ಕಾರಣವನ್ನು ಹುಡುಕುವ ನಾವು, ಮಹಾಕುಂಭದ ಹಿಂದಿನ ವೈಜ್ಞಾನಿಕ ಸತ್ಯವನ್ನು ಅರಿಯುವ ಪ್ರಯತ್ನವನ್ನೆ ಮಾಡುವುದಿಲ್ಲ ಏಕೆ?.


ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper



ನಮಗೆಲ್ಲ ಗೊತ್ತಿರುವಂತೆ ಸೂರ್ಯನು ತನ್ನ ಪಥ ಬದಲಾವಣೆಯ ಸಂದರ್ಭವನ್ನೆ ಸಂಕ್ರಮಣ ಕಾಲ ಎಂತಲು. ಆ ಸಂದರ್ಭದಲ್ಲಿ ನಮ್ಮ ಭೂಮಿಯೂ ಸೇರಿದಂತೆ ವಿಶ್ವದ ಅನೇಕ ಭಾಗದಲ್ಲಿ ಸೂರ್ಯನ ಕಿರಣಗಳು ಅತ್ಯಂತ ಪ್ರಖರವಾಗಿರಿತ್ತವೆ, ಮತ್ತೆ ಕೆಲವೆಡೆ ಈ ಕಿರಣಗಳ ಪ್ರಖರತೆಯ ಮಂದವಾಗಿರುತ್ತದೆ, ಇಂತಹ ಶಕ್ತಿಯ ಸಂಚಯದ ಕಾರಣದಿಂದಲೇ ನಮ್ಮ ಭೂಮಿ, ಪ್ರಕೃತಿ, ನಮ್ಮ ನದಿಗಳು ಇನ್ನಿತರ ಅಂಶಗಳಲ್ಲಿ ಆ ಸಂದರ್ಭಕ್ಕೆ ತಕ್ಕಂತೆ ಸೂರ್ಯನ ಕಿರಣಗಳಿಗೆ ಪ್ರತಿಕ್ರಿಯಿಸುವ ಇತರೇ ಧನಾತ್ಮಕ ಅಂಶಗಳಿಂದಾಗಿ ಅತ್ಯಂತ ಲಾಭದಾಯಕವಾದಂತಹ ಫಲಿತಾಂಶವನ್ನು ಆ ಕೆಲವು ಘಳಿಗೆಗಳಲ್ಲಿ ನಾವು ಕಾಣುತ್ತೇವೆ. ಅಂತಹ ಅತ್ಯಂತ ಅದ್ಬುತ ಕ್ಷಣಗಳು ಆ ಸ್ಥಳಗಳನ್ನು ಆ ಸಮಯವನ್ನು ಬಲು ಪವಿತ್ರವಾದ ಸಮಯ ಸ್ಥಳ ಎನ್ನಿಸಿಬಿಡುತ್ತಿವೆ ಇವು ಅಲ್ಲಿಯ ದೇಶವಾಸಿಗಳಿಗೆ ಒಂದು ರೀತಿಯ ಧನಾತ್ಮಕ ಜಾಗೃತಿಯನ್ನುಂಟು ಮಾಡುವುದೂ ಹೌದು.

ನಮಗೆಲ್ಲ ಗೊತ್ತಿರುವಂತೆ ಇಂತಹ ಸ್ಥಳಗಳಲ್ಲಿ ಒಂದಾದ ಪ್ರಯಾಗ ಮತ್ತಿತರ (ಉಜ್ಜೈನಿ, ನಾಸಿಕ್, ಹರಿದ್ವಾರ) ಸ್ಥಳಗಳಲ್ಲಿ ನಮ್ಮ ನಂಬುಗೆಯ ಅಮೃತದ ಹನಿಗಳು ಬಿದ್ದವೆಂಬ ಪೌರಾಣಿಕ ಹಿನ್ನೆಲೆ, ಶಾಸ್ತ್ರ ನಂಬುಗೆಯ ಸಂಗಮದ ಸ್ಥಳಗಳಲ್ಲಿ ಹುಟ್ಟುವಂತಹ ನೈಸರ್ಗಿಕ ಪ್ರಭಾವ ಅಲ್ಲಿನ ನೆಲ, ಜಲ, ವಾಯು ಸೇರಿ ಅಂದಿನ ಸೂರ್ಯನ ಕಿರಣಗಳ ಶಕ್ತಿ ಸಂಚಯಕ್ಕೆ ಪ್ರತಿಕ್ರಿಯಿಸುವುದರ ಮೂಲಕ ಅಲ್ಲಿ ನೆಲಿಸಿರುವ ಸುತ್ತ ಮುತ್ತಲಿನ ಜೀವರಾಶಿಯ ಮೇಲೂ ಧನಾತ್ಮಕ ಪ್ರಭಾವ ಬೀರುವ ಮೂಲಕ ಅವುಗಳ ಆರೋಗ್ಯ ಮತ್ತು ಅಲ್ಲಿನ ವ್ಯವಸ್ಥೆಯ ಮೇಲೆ ಇನ್ನಿಷ್ಟು ಮತ್ತೊಷ್ಟು ಪ್ರಭಾವ ಮತ್ತು ಶಕ್ತಿಸಂಚಯಕ್ಕೆ ಕಾರಣವಾಗುವುದರಲ್ಲಿ ಯಶಸ್ವಿಯಾಗುತ್ತದೆ.

ಕುಂಭ, ಪೂರ್ಣಕುಂಭ, ಮಹಾಕುಂಭ ಎನ್ನುವುದು ಒಂದು ಪವಿತ್ರ ಸ್ನಾನದ ಧಾರ್ಮಿಕ ವಿಧಿ ಹಾಗೆ, ಆ ಸಮಯಕ್ಕೆ ಅಲ್ಲಿ ಸೇರುವ ವಿವಿಧ ಸಾದಕರಾದ ಈ ನಾಗಾಗಳ, ವಿವಿಧ ಅಖಾಡಗಳು ಮತ್ತವರ ದರ್ಶನ ಆಶಿರ್ವಾದ ಜೊತೆಗೆ ಅವರು ಅಖಾಡ ಸಮೇತ ಸಂಗಮದಲ್ಲಿನ ಕುಂಭಸ್ನಾನಕ್ಕೆ ಪ್ರವೇಶಿಸುವ ಆರ್ಭಟವನ್ನು ನೋಡುವುದೇ ಒಂದು ಹಬ್ಬ. ಅದರಲ್ಲೂ ವಿವಿಧ ಶಾಹಿಸ್ನಾನ ಮಹೂರ್ತಗಳಂದು ಸಾರ್ವಜನಿಕರಿಗೆ ಅವರ ಮಧ್ಯೆ ಪ್ರವೇಶವೇ ಇರುವುದಿಲ್ಲ. ಏನಿದ್ದರೂ ಅವರ ಸಾಲುಗಳ ಭಾರಿ ಮೆರವಣಿಗೆ, ನೀರಿಗೆ ಧುಮುಕುವ ಆವೇಶವೆ ಒಂದು ದೊಡ್ಡ ವೈಭೋಗ. ಕುದುರೆ, ಆನೆ, ಬಂಡಿ, ಜನರ ಪಲ್ಲಕ್ಕಿ, ಅದರ ಮಧ್ಯೆ ವಿಪರೀತವಾದ ನರ್ತನ, ಒಂದೊಂದು ಸಾಲಿನಲ್ಲಿ ವಿಭಿನ್ನ ಸರಣಿ ಪೋಷಾಕು ದರ್ಶನ ಈ ಸಲ ಮಹೂರ್ತದ ಹೊತ್ತಿಗೆ ದಕ್ಕರುವ ದೃಶ್ಯಾವಳಿಗಳು ಅತ್ಯದ್ಭುತ. ಕುಂಭ ಮೇಳದಲ್ಲಿನ ಈ ನಾಲ್ಕು ವಿಧಗಳಾದ. ಕುಂಭ, ಅರ್ಧ ಕುಂಭ, ಪೂರ್ಣ ಕುಂಭ ಮತ್ತು ಮಹಾಕುಂಭ. ಈ ಎಲ್ಲಾ ಕುಂಭ ಮೇಳಗಳನ್ನು ಕೆಲ ನಿರ್ದಿಷ್ಠ ಗ್ರಹಗಳ ಸ್ಥಾನಕ್ಕೆ ಅನುಗುಣವಾಗಿ ಆಯೋಜಿಸಲಾಗುತ್ತದೆ.

ಕುಂಭಕ್ಕೆ ಆಗಮಿಸುವ ನಗ್ನ ಸಾಧುಗಳು ಆಗಮಿಸುವ ಈ ಪದ್ಧತಿ ಯಾವತ್ತಿಗೂ ಬದಲಿಸಲಾಗದ ಸಂಪ್ರದಾಯ. ಸ್ಥಳೀಯ ಪ್ರಯಾಗಭಾಟ್ ಅಥವಾ ಪ್ರಯಾಗವಾಲಾ ಈ ಮೂಹೂರ್ತವನ್ನು ನಿರ್ಧರಿಸುವ ಏಕಮಾತ್ರ ಸ್ವಾಮಿತ್ವ ಹೊಂದಿದ್ದು ಎಲ್ಲ ಅಖಾಡಗಳು ಇದನ್ನು ಪಾಲಿಸುತ್ತವೆ ಮತ್ತು ಸರಕಾರ ಕೂಡಾ ಅವರ ಮಾಹಿತಿಯಂತೆ ತಯಾರಿಗಿಳಿದು ಈ ಮೇಳ ಸಂಪನ್ನಗೊಳಿಸುತ್ತದೆ. ಈ ಉದ್ದೇಶಕ್ಕಾಗಿ ವಿಂಗಡಿಸಿ ಆಯಾ ಮುಖ್ಯಸ್ಥರ ಸುಪರ್ದಿಗೆ ಒಪ್ಪಿಸಲಾದ ಗುಂಪುಗಳನ್ನೇ ಇವತ್ತು ನಿರ್ದಿಷ್ಟ ಅಖಾಡ ಎಂದು ಕರೆಯಲಾಗುತ್ತಿದೆ.

ಕುಂಭಕ್ಕೆ ಆಗಮಿಸುವ ಈ ಗುಂಪುಗಳನ್ನು ಅದರಲ್ಲಿನ ಪ್ರಮುಖವಾಗಿ ನಿರ್ಮೋಹಿ, ನಿರಂಜನಿ, ಪಂಚ ದಶನಂ ಜುನಾ, ಕಿನ್ನರ, ಶಂಭು ಅಟಲ್ ಪಂಚಾಯಿತಿ, ಮಾಹಾ ನಿರ್ವಾಣಿ, ಬಡಾ ಉದಾಸೀನ, ನಯಾ ಉದಾಸಿನ, ದಿಗಂಬರ, ಪಂಚ ನಿರ್ವಾಣಿ, ನಿರ್ಮಲಾ, ಪಂಚಾಗ್ನಿ, ದಶನಾಮ ಆವಾಹನ ಮತ್ತು ತಪೋನಿಧಿ ಆನಂದ ಎಂಬ ಹೆಸರಿನಲ್ಲಿ ಹದಿನಾರು ಗುಂಪುಗಳು ಮಹಾಂತ ಎನ್ನುವ ಮುಖ್ಯಸ್ಥರುಗಳ ಅಡಿಯಲ್ಲಿ ನಡೆದುಕೊಂಡು ಹೋಗುತ್ತಿವೆ. ಆಯಾ ನಿಗದಿತ ಮಹೂರ್ತಕ್ಕೆ ಒಬ್ಬೊಬ್ಬರಿಗೂ ಸರದಿ ದಕ್ಕುತ್ತದೆ.

ಮಹಾಕುಂಭದ ಬೃಹತ್ ಜನಸಂಖ್ಯೆಯ ಈ ಭೇಟಿಯಿಂದಾಗಿ ಈ ಸಂಗಮದ ಮಹತ್ವ ಎಷ್ಟು ಜನರಿಗೆ ಆಗುತ್ತದೋ ಇಲ್ಲವೋ ಎನ್ನುವುದರ ಕುರಿತೇ ಮಾತನಾಡುವುದಕ್ಕಿಂತ. ಈಗ ನಾವು ಕಣ್ತುಂಬಿಕೊಂಡ ಈ ಸಂಭ್ರಮದ ಮಹಾಕುಂಭ ತುಂಬ ವಾಣಿಜ್ಯಾತ್ಮಕವಾಗಿಯೂ ಅನೇಕ ಜನರಿಗೆ, ಹೊಟೇಲ್ ಉದ್ಯಮ ಸೇರಿದಂತೆ, ಸಾರಿಗೆ, ಊಟ ಉಪಚಾರ ಹೀಗೆ ಹತ್ತು ಹಲವಾರು ರೀತಿಯಲ್ಲಿ ಜನರ ಮನೆ ಮತ್ತು ಮನಸ್ಸನ್ನು ತುಂಬಿಸಿದ್ದು ನಾವೆಲ್ಲ ಕಂಡಿದ್ದೇವೆ. ಸರಿಸುಮಾರು 7500 ಕೋಟಿ ರೂಪಾಯಿಗಳ ವ್ಯವಸ್ಥೆಯನ್ನು ಅಲ್ಲಿಯ ಸರಕಾರ ಪ್ರಯಾಗಕ್ಕೆ ಬರುವ ಜನರ ಅನುಕೋಲಕ್ಕೆಂದೆ ಬಳಸಿರುವ ಕುರಿತು ಹೇಳಿರಿವುದು, ಅದಕ್ಕೆ ಪ್ರತಿಯಾಗಿ ಸುಮಾರು 4 ಲಕ್ಷ ಕೋಟಿ ಆದಾಯವನ್ನೂ ನಿರೀಕ್ಷೆ ಮಾಡಿರುವುದನ್ನು ಗಮನಿಸಿದರೆ, ಇದು ಮಹಾಕುಂಭವೆ ಸರಿ.

ಅಂತೂ ಮಹಾಮೇಳವೊಂದು ದೇಶದ ಸಾಮಾನ್ಯ ನಾಗರಿಕನಿಂದ ಮಹಾಮಹಾ ಗಣ್ಯಾತಿಗಣ್ಯರನ್ನೂ ವಿದೇಶಿ ಪ್ರಮುಖರನ್ನೂ ಭಾರತದತ್ತ ತಿರಿಗುವಂತೆ ಮಾಡಿ, ಈಡೀ ವಿಶ್ವವೇ ಭಾರತದ ಭಕ್ತಿ ಪರಂಪರೆಯನ್ನು, ಅದರ ಶಕ್ತಿಯನ್ನು, ಅದರಲ್ಲಿನ ಸಂಘಟನೆಯನ್ನು, ಅದು ನೆಡೆದುಕೊಂಡು ಬಂದ ದಾರಿಯನ್ನು ನಮ್ಮ ಪರಂಪರೆಯನ್ನು ವಿಶ್ವಕ್ಕೆ ದರ್ಶನ ಮಾಡುಸುವಲ್ಲಿ ಯಶಸ್ವಿಯಾಗಿದೆ. ಏನಾದರೂ ಆಗಲಿ "ಮಾನವ ಧರ್ಮಕ್ಕೆ ಧರ್ಮಕ್ಕೆ ಜಯವಾಗಲಿ".

# ಮೈನವಿರೇಳಿಸಿದ ಪೈಲ್ವಾನರ ಕಸರತ್ತು



**ಮೊದಲ ಪುಟದಿಂದ**

ಹಂಪಿ ಕಿಶೋರಿ ವಿಭಾಗದಲ್ಲಿ ಬಾಗಲಕೋಟೆ ಗೋಪವ್ವ (ಪ್ರಥಮ), ಗದಗ ಸ್ನೇಹಾ (ದ್ವಿತೀಯ) ಬಹುಮಾನ ಪಡೆದಿದ್ದಾರೆ.

ಜಿಲ್ಲಾ ಮಟ್ಟದ ಕುಸ್ತಿ ಪಂದ್ಯಾವಳಿಯ ಪುರುಷರ 86ಕೆಜಿ ಮೇಲ್ಪಟ್ಟ ವಿಭಾಗದಲ್ಲಿ ಚಿಕ್ಕೇರಿ ತಿಪ್ಪೇಸ್ವಾಮಿ ಪ್ರಥಮ ಸ್ಥಾನಗಳಿಸಿ ಕಂಠೀರವ ಪ್ರಶಸ್ತಿಯ ಕಿರೀಟ ಧರಿಸಿದರು. ಪುರುಷ ವಿಭಾಗದ ಕಂಠೀರವ ಪ್ರಶಸ್ತಿಗೆ ಎನ್.ಎಂ.ಹಸನುಲ್ಲಾ(ದ್ವಿತೀಯ). 'ಹಂಪಿ ಕಿಶೋರ' ವಿಭಾಗದಲ್ಲಿ ಹರಪನಹಳ್ಳಿ ಕೆ.ಜಮೀರ್(ಪ್ರಥಮ), ಹರಪನಹಳ್ಳಿ ಕೆ.ಮಂಜುನಾಥ(ದ್ವಿತೀಯ), 75-85 ಕೆಜಿಯಲ್ಲಿ 'ಹಂಪಿ ಕೇಸರಿ'ಯಾಗಿ ಹರಪನಹಳ್ಳಿ ಅರವಿ ಕೆಂಚಪ್ಪ(ಪ್ರಥಮ), ಮರಿಯಮ್ಮನಹಳ್ಳಿ ಎಲ್.ಹನುಮಂತ(ದ್ವಿತೀಯ), 66-74 ಕೆಜಿಯಲ್ಲಿ 'ಹಂಪಿ ಕುಮಾರ' ವಿಭಾಗದಲ್ಲಿ ಹರಪನಹಳ್ಳಿ ಎಸ್.ಆಂಜನೇಯ(ಪ್ರಥಮ), ಹೊಸಪೇಟೆ ಕೆ.ಪರಶುರಾಮ(ದ್ವಿತೀಯ) ಸ್ಥಾನ ಪಡೆದರು. ವಿಜೇತರಿಗೆ ಪ್ರಥಮ 10 ಸಾವಿರ ರೂ. ಮತ್ತು ದ್ವಿತೀಯ 5 ಸಾವಿರ ರೂ.ನಗದು ಬಹುಮಾನ ನೀಡಲಾಯಿತು.




ರಾಜ್ಯ ಮಟ್ಟದ ಪುರುಷ, ಮಹಿಳೆ ಕುಸ್ತಿಯಲ್ಲಿ ನಾಲ್ಕು ತೂಕದ ವಿಭಾಗದ ವಿಜೇತರಿಗೆ ಹಂಪಿ ಕಿಶೋರ, ಹಂಪಿ ಕಿಶೋರಿ, ಹಂಪಿ ಕುಮಾರ, ಹಂಪಿ ಕುಮಾರಿ, ಹಂಪಿ ಕೇಸರಿ, ಹಂಪಿ ಕಂಠೀರವ, ಹಂಪಿ ಮಹಿಳಾ ಕಂಠೀರವ ಪ್ರಶಸ್ತಿಯನ್ನು ನೀಡಲಾಯಿತು. ಕುಸ್ತಿ ಪಂದ್ಯಾವಳಿಯಲ್ಲಿ ಬೆಳಗಾವಿ, ದಾವಣಗೆರೆ, ಬಾಗಲಕೋಟೆ, ಹಾವೇರಿ, ವಿಜಯಪುರ, ವಿಜಯನಗರ, ಗದಗ, ಉತ್ತರ ಕನ್ನಡ ಜಿಲ್ಲೆಗಳಿಂದ ಕುಸ್ತಿಪಟುಗಳು ಭಾಗವಹಿಸಿದ್ದರು.

ರಾಜ್ಯ ಮಟ್ಟದ ಪುರುಷ, ಮಹಿಳಾ ಮತ್ತು ಜಿಲ್ಲಾ ಮಟ್ಟದ ಪುರುಷ ಸ್ಪರ್ಧೆಗಳಲ್ಲಿ ಕುಸ್ತಿಯು ನಾಲ್ಕು ವಿಭಾಗಗಳಲ್ಲಿ ನಡೆಸಲಾಯಿತು. ರಾಜ್ಯಮಟ್ಟದ ಕುಸ್ತಿಯಲ್ಲಿ ಪುರುಷರು- 31, ಮಹಿಳೆಯರು -25, ಜಿಲ್ಲಾ ಮಟ್ಟದ ಪುರುಷರ ಚಿತ್ ಕುಸ್ತಿ ವಿಭಾಗದಲ್ಲಿ 31 ಸೇರಿ ಒಟ್ಟು 87 ಸ್ಪರ್ಧಿಗಳು ಭಾಗವಹಿಸಿದ್ದರು. ರಾಜ್ಯ ಮಟ್ಟದ ಪುರುಷರ ಕುಸ್ತಿ ಪಂದ್ಯಾವಳಿ 57-65 ಕೆಜಿ, 66-74 ಕೆಜಿ, 75-85 ಕೆಜಿ, 86 ಮೇಲ್ಪಟ್ಟು, ಕುಸ್ತಿ ಪಂದ್ಯಾವಳಿಗಳು, ರಾಜ್ಯ ಮಟ್ಟದ ಮಹಿಳೆಯರ ಕುಸ್ತಿ ಪಂದ್ಯಾವಳಿ 50 ಕೆಜಿ, 51-54 ಕೆಜಿ, 55-57 ಕೆಜಿ, 58 ಕೆಜಿ ಮೇಲ್ಪಟ್ಟು ಕುಸ್ತಿ ಪಂದ್ಯಾವಳಿ ಹಾಗೂ ಜಿಲ್ಲಾ ಮಟ್ಟದ ಪುರುಷರ ಕುಸ್ತಿ ಪಂದ್ಯಾವಳಿ 57-65 ಕೆಜಿ, 66-74 ಕೆಜಿ, 75-85 ಕೆಜಿ, 86 ಕೆಜಿ ಮೇಲ್ಪಟ್ಟು ಕುಸ್ತಿ ಪಂದ್ಯಾವಳಿಯನ್ನು ಸಂಘಟಿಸಲಾಗಿತ್ತು.


ಹಂಪಿ ಉತ್ಸವದ ಎರಡನೇ ದಿನ ಎಂಪಿ ಪ್ರಕಾಶ್ ಪ್ರಧಾನ ವೇದಿಕೆ ಕಾರ್ಯಕ್ರಮ ವೀಕ್ಷಿಸುತ್ತಿರುವ ಜನಸ್ತೋಮ

# ಬಂಡಿಗಾಲಿ ತೊಡಿಸುವ ಸ್ಪರ್ಧೆ

## 1.46 ನಿಮಿಷದಲ್ಲಿ ಗಾಲಿಗಳನ್ನು ಜೋಡಿಸಿದ ಹನುಮಂತ ಪ್ರಥಮ

**■ ಹಂಪಿ ಟೈಮ್ಸ್ ಹೊಸಪೇಟೆ**

ಗ್ರಾಮೀಣ ಕ್ರೀಡೆಯಲ್ಲಿ ರೈತಾಪಿ ವರ್ಗವನ್ನು ಗಮನಸೆಳೆಯುವ ನಿಟ್ಟಿನಲ್ಲಿ ಎತ್ತಿನ ಬಂಡಿಯ ಗಾಲಿ ತೊಡಿಸುವ ಸ್ಪರ್ಧೆ ಜನಾಕರ್ಷಣೆ ಪಡೆಯಿತು. ಬಂಡಿಯ ಗಾಲಿ ಬಿಚ್ಚಿ ಪುನಃ ತೊಡಿಸುವ ಪಂದ್ಯಾವಳಿಯಲ್ಲಿ ಒಟ್ಟು 11 ಜನ ಯುವಕರು ಭಾಗವಹಿಸಿದ್ದರು. ಹೊಸಪೇಟೆಯ ಹನುಮಂತ ಅವರು 1.46 ನಿಮಿಷದಲ್ಲಿ ಗಾಲಿಗಳನ್ನು ಬಿಚ್ಚಿ ತೊಡಿಸುವ ಮೂಲಕ ಪ್ರಥಮ ಸ್ಥಾನ ಗಿಟ್ಟಿಸಿಕೊಂಡರು. ಇನ್ನೋರ್ವ ಸ್ಪರ್ಧಿ ಹೊಸಪೇಟೆಯ ವೆಂಕೋಬರವರು 2.15 ನಿಮಿಷದಲ್ಲಿ ತೊಡಿಸಿ ದ್ವೀತಿಯ ಸ್ಥಾನ, ದೇವಪ್ಪರವರು 2.25 ನಿಮಿಷದಲ್ಲಿ ಬಂಡಿಗಾಲಿಗಳನ್ನು ಜೋಡಿಸಿ ವಿಜೇತರಿಗೆ ತಲಾ 10, 5 ಹಾಗೂ 3 ಸಾವಿರ ರೂಗಳ ನಗದು ಹಾಗೂ ಪ್ರಶಸ್ತಿ ಪತ್ರದೊಂದಿಗೆ ಹಂಪಿಯ ಭಾವಚಿತ್ರವನ್ನು ಕಾಣಿಕೆಯನ್ನಾಗಿ ನೀಡಲಾಯಿತು.

ಕಲ್ಲು ಗುಂಡು ಎತ್ತುವ ಸ್ಪರ್ಧೆ: ಕಲ್ಲು ಗುಂಡು ಎತ್ತುವ ಸ್ಪರ್ಧೆಯಲ್ಲಿ ಮುದ್ದೇಬಿಹಾಳದ ಶೇಖಪ್ಪ ಯಾಳವರ 155 ಕೆ.ಜಿ ತೂಕದ ಗುಂಡನ್ನು ಕೇವಲ 1.97 ನಿಮಿಷದಲ್ಲೇ ಎತ್ತುವ ಮೂಲಕ ಪ್ರಥಮ ಸ್ಥಾನ ಗಿಟ್ಟಿಸಿಕೊಂಡರು. ಯಾದಗಿರಿ ಜಿಲ್ಲೆಯ ಶಹಾಪುರದ ಮರೆಪ್ಪ 2.89 ನಿಮಿಷದಲ್ಲಿ ಗುಂಡು ಎತ್ತುವ ಮೂಲಕ ದ್ವಿತೀಯ ಸ್ಥಾನ ಪಡೆದರು. ಕಂಪ್ಲಿಯಗಸರ ಮಾರುತಿ ಮತ್ತು ಯಾದಗಿರಿ ಜಿಲ್ಲೆಯ ವೆಂಕಟೇಶ್ ಗುಂಡುಗಳನ್ನು ಎತ್ತುವಲ್ಲಿ ವಿಫಲರಾದರು. ಗ್ರಾಮೀಣ ಕ್ರೀಡೆಯಲ್ಲಿ ವಿಶೇಷ ಸ್ಪರ್ಧೆಯಾದ ಗುಂಡು ಎತ್ತುವ ಸ್ಪರ್ಧೆ ವೀಕ್ಷಣೆಗಳು ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿ ಸಿಳ್ಳೆ ಕೇಕೆ ಹಾಕಿದರು. ಪ್ರಥಮ 10 ಸಾವಿರ, ದ್ವಿತೀಯ 5 ಸಾವಿರ, ತೃತೀಯ 3 ಸಾವಿರ ರೂಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು.



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




## ಕವಿ ಮನಸು

### ಹಂಪಿ ಉತ್ಸವ

ಹಂಪಿ ಉತ್ಸವ
ವಿಜಯನಗರದ ಮಹೋತ್ಸವ
ಕಲ್ಲು ಬಂಡೆಗಳಲ್ಲಿ ಕಾಣುವ
ಸಂಸ್ಕೃತಿಯ ಉತ್ಸವ

ಸ್ಮಾರಕ ಕಟ್ಟಡಗಳ
ಶಿಲ್ಪ ಕಲೆಗಳ ವೈಭವ
ನಾಡಿನ ಶ್ರೀಮಂತಿಕೆಯ
ವಿಜಯೋತ್ಸವ

ತುಂಗಾ ಭದ್ರೆಯ ಗಿರಿ
ಸಿರಿಗಳಲ್ಲಿನ ಶೃಂಗಾರದ
ನರ್ತನದ ಸಂತಸದ
ತೆಪ್ಪೋತ್ಸವ

ಕಣ್ಮನಗಳಲ್ಲಿ ಸೂರೆಗೊಂಡು
ಆಕರ್ಷಿಸುವ ಮನಗಳಲ್ಲಿ
ನೆಲೆನಿಲ್ಲುವ ಸವಿಯಾದ
ಕಂಪಿನೋತ್ಸವ

ಕನ್ನಡಿಗರನ್ನೆಲ್ಲಾ
ಕೈ ಬೀಸಿ ಕರೆಯುವ
ಜೀವ ಕಳೆಯ ಉತ್ಸವ
ಹಂಪಿ ಉತ್ಸವ

- GRB

# ಇತಿಹಾಸಕಾರರಿಗೆ ಬಹುಭಾಷ ಜ್ಞಾನ ಅಗತ್ಯ

## ವಿಚಾರ ಸಂಕಿರಣದ ಸರ್ವಾಧ್ಯಕ್ಷ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿಕೆ। ಸಾಳ್ವ,ಅರವೀಡು ವಂಶಗಳ ಅಧ್ಯಯನ ನಡೆಯಲಿ

## ಈ ಭಾಗದ ಶಾಲಾ ವಿದ್ಯಾರ್ಥಿಗಳಿಗೆ ವಿಜಯನಗರ ಸಾಮ್ರಾಜ್ಯದ ಇತಿಹಾಸ ತಿಳಿಸಿ ಎಂದ ಶಾಸಕ ಎಚ್.ಆರ್.ಗವಿಯಪ್ಪ



■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಸಾಮ್ರಾಜ್ಯದ ಅವನತಿ ಕುರಿತು ಇತಿಹಾಸಕಾರರಲ್ಲಿ ಸ್ಪಷ್ಟತೆ ಮೂಡಲು ಸಾಳ್ವ ಹಾಗೂ ಅರವೀಡು ವಂಶಗಳ ಕುರಿತು ಹೆಚ್ಚಿನ ಅಧ್ಯಯನ ಕೈಗೊಳ್ಳುವ ಅಗತ್ಯವಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅಭಿಮತ ವ್ಯಕ್ತಪಡಿಸಿದರು.

ಹಂಪಿ ಉತ್ಸವ-2025 ಅಂಗವಾಗಿ ಶನಿವಾರ ಕಮಲಾಪುರದ ಪುರಾತತ್ತ್ವ ಇಲಾಖೆ ಕಚೇರಿ ಆವರಣದಲ್ಲಿ ಆಯೋಜಿಸಲಾದ ವಿಜಯನಗರ ಅಧ್ಯಯನ ಕುರಿತು 27ನೇ ವಾರ್ಷಿಕ ವಿಚಾರ ಸಂಕಿರಣದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿದರು. ವಿಜಯನಗರ ಸಾಮ್ರಾಜ್ಯವನ್ನು ಸಂಗಮ, ತುಳು, ಸಾಳ್ವ ಹಾಗೂ ಅರವೀಡು ವಂಶಗಳು ಆಳ್ವಿಕೆ ಮಾಡಿವೆ. ಇದರುವರೆಗೂ ಸಂಗಮ ಹಾಗೂ ತುಳು ವಂಶಗಳ ಅರಸರ ಕೊಡುಗೆ ಕುರಿತು ಹೆಚ್ಚಿನ ಅಧ್ಯಯನಗಳು ನಡೆದಿವೆ. ಆದರೆ ಸಾಳ್ವ ಹಾಗೂ ಅರವೀಡು ವಂಶಗಳ ಕುರಿತು ವ್ಯಾಪಕ ಅಧ್ಯಯನಗಳು ನಡೆದಿಲ್ಲ. ವಿಜಯನಗರ ಕುರಿತು ಈವರೆಗೂ ನಡೆದ ಸಂಶೋಧನೆಗಳ ಪುನರ್ ಅಧ್ಯಯದ ಅವಶ್ಯಕತೆಯಿದೆ. ವಸ್ತುನಿಷ್ಠ, ಬಹುತ್ವ ಹಾಗೂ ವಿಶಾಲ ದೃಷ್ಟಿಕೋನದಿಂದ ಅಧ್ಯಯನವಾಗಬೇಕಿದೆ. ಇತಿಹಾಸಕಾರರು ಅರವೀಡು ವಂಶದ ಆಡಳಿತಾಗರರ ಅಧ್ಯಯನದ ಬಗ್ಗೆ ನಿರ್ಲಕ್ಷ್ಯ ತೋರಿದ್ದಾರೆ ಎನಿಸುತ್ತದೆ. ಇದಕ್ಕೆ ಹಲವಾರು ಕಾರಣಗಳಿವೆ. ಅರವೀಡು ವಂಶಜರು ಆಂಧ್ರ ಪ್ರದೇಶದ ಕರ್ನೂಲು ಮೂಲದವರು, ಇವರ ಆಡಳಿತ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತಮಿಳು ನಾಡಿನಲ್ಲಿ ಹಂಚಿಕೆಯಾಗಿತ್ತು. ರಕ್ಕಸತಂಗಡಿ ಯುದ್ದದಲ್ಲಿ ಸಾಮ್ಯಾಜ್ಯ ರಕ್ಷಣೆಗಿಂತ ತಮ್ಮ ಪ್ರಾಣ ಹಾಗೂ ಸಂಪತ್ತಿನ ರಕ್ಷಣೆ ಪ್ರಾಮುಖ್ಯತೆ ನೀಡಿದರು ಎಂಬ ಭಾವನೆಯಿದೆ. ಅರವೀಡು ವಂಶದ ಅಧ್ಯಯನಕ್ಕೆ ಕನ್ನಡ, ತೆಲುಗು, ತಮಿಳು ಭಾಷೆಗಳ ಸಾಹಿತ್ಯ ಹಾಗೂ ಐತಿಹ್ಯಗಳನ್ನು ಒಗ್ಗೂಡಿಸಿ ಸಂಶೋಧನೆ ಮಾಡಬೇಕಿದೆ. ಇದು ಬಹು ಭಾಷೆಯ ಜ್ಞಾನ ಇಲ್ಲದ ಇತಿಹಾಸಕಾರಿಗೆ ತೊಡಕಾಗಿ ಪರಿಣಮಿಸಿದೆ ಎಂದು ಅಭಿಪ್ರಾಯಪಟ್ಟರು.

ತಾತಪಿನ್ನಮ, ಸೋಮಿದೇವ, ರಾಘವದೇವ, 2ನೇ ಪಿನ್ನಮ, ಅರವೀಡು ಬುಕ್ಕ, ಅರವೀಡು ರಾಮರಾಜ, ಶ್ರೀರಂಗರಾಜ, ತಿರುಮಲ ಹಾಗೂ ಅಳಿಯ ರಾಮರಾಯ ಅರವೀಡು ವಂಶಕ್ಕೆ ಸೇರಿದವರಾಗಿದ್ದಾರೆ. ಇವರಲ್ಲಿ ತಿರುಮಲ, ಕೃಷ್ಣ ದೇವರಾಯನ ಅಳಿಯನಾಗಿದ್ದು, ರಕ್ಕಸತಂಗಡಿ ಯುದ್ದದ ಬಳಿಕ ಹರಿದು ಹಂಚಿಹೋದ ಪ್ರದೇಶಗಳನ್ನು ಒಗ್ಗೂಡಿಸಲು ಪ್ರಯತ್ನಿಸಿದ. ಸಾಮ್ರಾಜ್ಯ ವಿಸ್ತರಣೆ ಮಾಡಿದ ಎಂದು ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ತಿಳಿಸಿದರು.

ನಿವೃತ್ತ ಪ್ರೊಫೆಸರ್ ಎಂ.ವಿ.ಶ್ರೀನಿವಾಸ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಹಂಪಿ ಉತ್ಸವದ ವಿಚಾರ ಸಂಕಿರಣದಲ್ಲಿ ವಿಜಯನಗರ ಸಾಮ್ರಾಜ್ಯದ ಬಗೆಗಿನ ಅಧ್ಯಯನ ಪಾವಿತ್ರ್ಯತತೆ ಹಾಳುಮಾಡಿಲ್ಲ. ಸಂಶೋಧನಾ ಪ್ರಬಂಧಗಳಲ್ಲಿ ಬೌದ್ಧಿಕ ಶ್ರೇಷ್ಠತೆ ಕಾಪಾಡಿಕೊಂಡು ಬರಲಾಗಿದೆ. ಕದಂಬ, ಚಾಲುಕ್ಯ, ಹೊಯ್ಸಳ, ರಾಷ್ಟ್ರಕೂಟ ಸೇರಿದಂತೆ ಹತ್ತಾರು ಸಾಮ್ರಾಜ್ಯಗಳು ಕರ್ನಾಟಕದಲ್ಲಿ ಆಳ್ವಿಕೆ ನಡೆಸಿವೆ. ಆದರೆ ವಿಜಯನಗರ ಸಾಮ್ಯಾಜ್ಯದ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆದಿವೆ. ರೋಮ್ ಸಾಮ್ರಾಜ್ಯದ ಹೊರತಾಗಿ ವಿಶ್ವದಲ್ಲೇ ಅತಿ ಹೆಚ್ಚು ಸಂಶೋಧನೆಗಳು ವಿಜಯನಗರ ಸಾಮ್ರಾಜ್ಯದ ಕುರಿತಾಗಿ ಇವೆ ಎಂಬುದಾಗಿ ಹೇಳಿದರು.

ಇದುವರೆಗೂ ಬೃಹತ್ ಹಾಗೂ ಸೂಕ್ಷ್ಮ ಸ್ತರದಲ್ಲಿ ವಿಜಯನಗರ ಸಾಮ್ರಾಜ್ಯದ ಕುರಿತು ಅಧ್ಯಯನಗಳಾಗಿವೆ. ಸಂಕುಚಿತ ದೃಷ್ಟಿ ಬದಲಾಗಿ ವಿಶಾಲ ಹಾಗೂ ವೈಜ್ಞಾನಿಕ ದೃಷ್ಟಿಕೋನ ನೀಡಲು ಪ್ರಯತ್ನಿಸಲಾಗಿದೆ. ವಿಜಯನಗರ ಅರಸರ ಸರ್ವತೋಮುಖವಾಗಿ ಕೊಡುಗೆಗಳ ಅಧ್ಯಯನ ಮಾಡಲಾಗಿದೆ. ಭೌಗೋಳಿಕ, ಭಾಷೆ, ಸೈದ್ಧಾಂತಿಕ ಹಿನ್ನಲ 'ಯಲ್ಲಿ ವಿಜಯನಗರ ಸಾಮ್ರಾಜ್ಯದ ಕುರಿತು ಅಧ್ಯಯನಗಳು ನಡೆದಿವೆ. ಆರಂಭದ ಅಧ್ಯಯನಗಳಲ್ಲಿ ಮುಸ್ಲಿಂ ಆಡಳಿತ ವಿರೋಧಿಯಾಗಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಯಾತು ಎನ್ನುವ ಸೈದ್ಧಾಂತಿಕ ವಾದ ಪ್ರಚಲಿತದಲ್ಲಿತ್ತು. ಕೃಷ್ಣ ದೇವರಾಯ ಸೇರಿದಂತೆ ಹಲವು ಅರಸರ ಸರ್ವಧರ್ಮ ಸಹಿಷ್ಣು ಮನೋಭಾವ ಇತಿಹಾಸದಲ್ಲಿ ದಾಖಲೆ ರೂಪದಲ್ಲಿ ಉಳಿದಿವೆ ಎಂದು ಸ್ಪಷ್ಟಡಿಸಿದರು.

ಪುರಾತತ್ತ್ವ ಇಲಾಖೆ ನಿರ್ದೇಶಕ ಡಾ.ಆರ್.ಶೇಜೇಶ್ವರ ಪ್ರಾಸ್ತಾವಿಕವಾಗಿ ಮಾತನಾಡಿ, ಕಳೆದ 27 ವರ್ಷಗಳಿಂದಲೂ ನಿರಂತರವಾಗಿ ವಿಚಾರಣ ಸಂಕಿರಣ ಆಯೋಜಿಸಲಾಗಿದೆ. ಇದುವರೆಗೂ 754 ಪ್ರಬಂಧ ಮಂಡನೆಯಾಗಿವೆ. ಪ್ರತಿ ವರ್ಷ ಮಂಡನೆಯಾಗುವ ಪ್ರಬಂಧ, ಸಂಶೋಧನಾ ವರದಿಗಳನ್ನು ಪುರಾತತ್ತ್ವ ಇಲಾಖೆಯಿಂದ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಾ ಬರಲಾಗುತ್ತಿದೆ ಎಂದು ತಿಳಿಸಿದರು. ಈ ವೇಳೆ ಹಂಪಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಜನಿ ಷಣ್ಮುಖ ಗೌಡ, ಕಲಮಲಾಪುರ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಗೋಪಾಲಕೃಷ್ಣ, ಪುರತತ್ವ ಇಲಾಖೆ ಉಪನಿರ್ದೇಶಕಿ ಕಾವ್ಯಶ್ರೀ, ತಹಶೀಲ್ದಾರ್ ಶೃತಿ.ಎಂ, ಪುರತತ್ವ ಸಹಾಯಕರಾದ ಡಾ.ಆರ್.ಮಂಜನಾಯ್ಕ್ ಮತ್ತಿರರು ಉಪಸ್ಥಿತರಿದ್ದರು. ಸುಮಾರು 61 ವಿದ್ವಾಂಸರು 6 ಗೋಷ್ಠಿಗಳಲ್ಲಿ ಸಂಶೋಧನಾ ಪ್ರಬಂಧ ಗಳನ್ನು ಮಂಡಿಸಿದರು. ಪ್ರವಾಸಿ ಮಿತ್ರರರಿಗೆ ಸಮವಸ್ತ್ರ ವಿತರಿಸಲಾಯಿತು.

> **ಇಂದಿನ ಮಕ್ಕಳು ಕೃತಕ ಬುದ್ದಿಮತ್ತೆ ಯುಗದಲ್ಲಿ ಕಳೆದು ಹೋಗುತ್ತಿದ್ದಾರೆ. ಇವರಿಗೆ ಇತಿಹಾಸ ಪರಿಚಯವಾಗಬೇಕು. ಇದುವರೆಗೂ ಹಂಪಿ ಉತ್ಸವದ ಅಂಗವಾಗಿ ಏರ್ಪಡಿಸಿದ ವಿಚಾರ ಸಂಕಿರಣಗಳ ಸಂಶೋಧನೆಯ ಶೇ.10 ರಷ್ಟು ಸಾರ ಜನರಿಗೆ ತಲುಪಿಲ್ಲ. ಇತಿಹಾಸ ಜ್ಞಾನ ಇಂದು ನಶಿಸಿ ಹೋಗುತ್ತಿದೆ. ಕ್ಷೇತ್ರದಲ್ಲಿ 120 ಸರ್ಕಾರಿ ಶಾಲೆಗಳು ಇವೆ. ಈ ಮಕ್ಕಳಿಗೆ ಪುರಾತತ್ತ್ವ ಇಲಾಖೆಯಿಂದ ಇತಿಹಾಸ ಕುರಿತು ಸಂವಾದಗಳು, ವಿಚಾರ ಸಂಕಿರಣ, ಕ್ಷೇತ್ರ ಭೇಟಿಗಳನ್ನು ಏರ್ಪಡಿಸಬೇಕು. ಶಾಸಕರ ಅನುದಾನದಲ್ಲಿ ಮಕ್ಕಳಿಗೆ ಬಸ್ ಹಾಗೂ ಊಟದ ಸೌಲಭ್ಯ ನೀಡುತ್ತೇನೆ. ಪುರಾತತ್ತ್ವ ಇಲಾಖೆ ವಿಜಯನಗರ ಸಾಮ್ರಾಜ್ಯದ ಜ್ಞಾನವನ್ನು ಮಕ್ಕಳಿಗೆ ಹಂಚುವ ಕೆಲಸ ಮಾಡಬೇಕು.**
>
> – **ಹೆಚ್.ಆರ್.ಗವಿಯಪ್ಪ** ಶಾಸಕ, ವಿಜಯನಗರ

**ಹಂಪಿ ಟೈಮ್ಸ್** SSLC **ಮಾರ್ಗದರ್ಶಿ**
**ಇ-ಪೇಪರ್ನಲ್ಲೂ ಲಭ್ಯ**
**ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..**
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಕ್ರೋಧಿ

**02-03-2025 – ಶನಿವಾರ**

| | |
|---|---|
| ತಿಥಿ | : ತೃತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉ.ಭಾದ್ರಪದ/ರೇವತಿ |
| ಯೋಗ | : ಶುಭ |
| ಕರಣ | : ತೈತುಲ |
| ಸೂರ್ಯೋದಯ | : 06:48:53 |
| ಸೂರ್ಯಾಸ್ತ | : 18:29:25 |
| ರಾಹು ಕಾಲ | : 17:02–18:29 |
| ಯಮಘಂಡ ಕಾಲ | : 12:39–14:07 |
| ಗುಳಿಕ ಕಾಲ | : 15:34–17:02 |



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 01–03–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1607.26 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7068 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 32.490 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1586.66 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 886 ಕ್ಯುಸೆಕ್ |
| ಸಾಮರ್ಥ್ಯ | 8.461 ಟಿಎಂಸಿ |




## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ನಾವು ಸಿದ್ಧ 20 ದಿನ

https://epaper.hampitimes.com

**ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು**

ನಿತ್ಯ ಏಳಿಗೆ ನೆನೆ ಶ್ರೀ³

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಸಮಾಜ ವಿಜ್ಞಾನ

### 10ನೇ ತರಗತಿ ಸಮಾಜವಿಜ್ಞಾನ (ಸಮಾಜ ಶಾಸ್ತ್ರ ವಿಭಾಗ) 3/4 ಅಂಕದ ಬಹು ನೀರಿಕ್ಷೀತ ಪ್ರಶ್ನೆಗಳು

**1) ಸಾಮಾಜಿಕ ಸ್ತರವಿನ್ಯಾಸ ಎಂದರೇನು?**
**ಉತ್ತರ:–** ಜನರನ್ನು ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ, ಉದ್ಯೋಗ, ಮೊದಲಾದುವುಗಳ ಆಧಾರದ ಮೇಲೆ ಮೇಲು-ಕೀಳು ಎಂದು ವಿಂಗಡಿಸುವುದು

**2) ಪೂರ್ವಾಗ್ರಹ ಎಂದರೇನು?**
**ಉತ್ತರ:–** ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದವರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆ.

**3) ಪೂರ್ವಗ್ರಹಕ್ಕೆ ಕಾರಣಗಳೇನು?**
**ಉತ್ತರ:–** * ಜಾತಿ ತಾರತಮ್ಯ * ಲಿಂಗ ತಾರತಮ್ಯ ಪ್ರಾದೇಶಿಕ ತಾರತಮ್ಯ * ಬಡವ-ಬಲ್ಲಿದ ತಾರತಮ್ಯ

**4) ಪರಿಸರ ಸಂರಕ್ಷಣೆಗೆ ನಡೆದಸಾಮೂಹಿಕ ಪ್ರತಿಭಟನೆಗಳನ್ನು ಪಟ್ಟಿ ಮಾಡಿರಿ.**
**ಉತ್ತರ:–** * ಚಿಪ್ಕೋ ಚಳುವಳಿ * ಅಪ್ಪಿಕೋ ಚಳುವಳಿ.
* ನರ್ಮದಾ ಬಚಾವೋ ಆಂದೋಲನ. * ಕೈಗಾ ಅಣುಸ್ಥಾವರ ವಿರೋಧ ಚಳುವಳಿ * ಮೌನ ಕಣಿವೆ ಆಂದೋಲನ

**5) ದೊಂಬಿಯ ಸ್ವರೂಪವನ್ನು ವಿವರಿಸಿ**
**ಉತ್ತರ:–** * ನಿರ್ದಿಷ್ಟ ಉದ್ದೇಶವಿರುವುದಿಲ್ಲ. * ಏಕತೆಯಿರುವುದಿಲ್ಲ.
* ಅಪಾರ ಪ್ರಮಾಣ ಹಾನಿ ಸಾಧ್ಯತೆ. * ಕಾನೂನು ವ್ಯವಸ್ಥೆಗೆ ಸವಾಲು. * ವಸ್ತುಗಳ ಧ್ವಂಸ ಮತ್ತು ಗೊಂದಲ ಸೃಷ್ಟಿ.
* ಕೋಮು ಗಲಭೆ * ಜನಾಂಗೀಯ ಕಲಹ,
* ನಗರ ಪಟ್ಟಣಗಳಲ್ಲಿ ಹೆಚ್ಚಾಗಿರುತ್ತದೆ.
* ಗುಂಪು ಘರ್ಷಣೆ. * ದೀರ್ಘಕಾಲ ಇರುವುದಿಲ್ಲ

**6) ಅಸ್ಪೃಶ್ಯತೆ ನಿವಾರಣೆಗೆ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು?**
**ಉತ್ತರ:–** * 17 ನೇ ವಿಧಿ ಅಸ್ಪೃಶ್ಯತೆ ಆಚರಣೆ ನಿಷೇಧಿಸುತ್ತದೆ. * ಎಲ್ಲಾ ನಾಗರಿಕರಿಗೆಸಮಾನ ಅವಕಾಶ ನೀಡಲಾಗಿದೆ.* 1955 ರಲ್ಲಿ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಜಾರಿ ಮಾಡಲಾಗಿದೆ. * ಶಿಕ್ಷಣದ ಹಕ್ಕು, * ಸಮಾನತೆಯಹಕ್ಕು, ರಾಜಕೀಯ ಹಕ್ಕು, ನೀಡಲಾಗಿದೆ.
* 1976 ರಲ್ಲಿ ನಾಗರಿಕ ಹಕ್ಕುಗಳಸಂರಕ್ಷಣಾ ಕಾಯ್ದೆ ಜಾರಿ ತರಲಾಗಿದೆ. * ಸಾರ್ವತ್ರಿಕ ಮತದಾನ ಹಕ್ಕುನೀಡಲಾಗಿದೆ.
* ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡಲಾಗಿದೆ. * ಅಸ್ಪೃಶ್ಯತೆ ನಿರ್ಮೂಲನೆಗೆ ರಾಜ್ಯಗಳಿಗೆ ವಿಶೇಷ ಜವಾಬ್ದಾರಿ ನೀಡಲಾಗಿದೆ

**7) ನಿರುದ್ಯೋಗಕ್ಕೆ ಕಾರಣಗಳನ್ನು ತಿಳಿಸಿರಿ.**
**ಉತ್ತರ:–** * ಅಧಿಕ ಜನಸಂಖ್ಯೆ. * ಯಾಂತ್ರಿಕರಣ.
* ಶ್ರಮ ವಿಭಜನೆ. * ಸಾಮಾಜಿಕ ಅಸಮಾನತೆ.
* ಬಂಡವಾಳ ಕೊರತೆ.* ಅನಕ್ಷರತೆ.

**8) ನಿರುದ್ಯೋಗದ ಪರಿಣಾಮಗಳನು ತಿಳಿಸಿರಿ**
**ಉತ್ತರ:–** * ಬಡತನ. * ಅನಾರೋಗ್ಯ * ಭ್ರಷ್ಟಾಚಾರ. * ಕೌಟುಂಬಿಕ ವಿಘಟನೆ. * ಮೋಸ ವಂಚನೆ. ಕಳ್ಳತನ * ಶೈಕ್ಷಣಿಕ ಸುಧಾರಣೆಗಳು

**9) ಮಹಿಳಾ ಸ್ವಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿರಿ?**
**ಉತ್ತರ:–** * ಸ್ತ್ರೀಯರ ಸಾಮೂಹಿಕ ಶಕ್ತಿ ಬಲವರ್ಧನೆ ಸಾಧ್ಯವಾಗುತ್ತದೆ. * ಸ್ತ್ರೀಯರ ಆರ್ಥಿಕ ಸಬಲೀಕರಣಸಾಧ್ಯವಾಗುತ್ತದೆ.
* ಸಾಮಾಜಿಕ ಅಭಿವೃದ್ಧಿಗೆ ಅವಕಾಶಮಾಡಿಕೊಡುತ್ತದೆ.
* ಸ್ತ್ರೀಯರಿಗೆ ಸ್ವಾವಲಂಬಿ ಜೀವನಕ್ಕೆ ಸಹಾಯಕವಾಗುತ್ತದೆ.
* ಸ್ತ್ರೀಯರ ಮೇಲಿನ ದೌರ್ಜನ್ಯ ತಡೆಗೆ ಸಹಾಯಕವಾಗುತ್ತದೆ.
* ಸ್ತ್ರೀಯರಿಗೆ ಹಕ್ಕು, ಗೌರವ,ಅಧಿಕಾರ, ಸ್ವಾತಂತ್ರ್ಯ ದೊರಯುತ್ತದೆ.
* ಸ್ತ್ರೀಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಸೂಕ್ತ ಅವಕಾಶ ದೊರೆಯುತ್ತದೆ.
* ಸರಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಲು ಸಾಧ್ಯವಾಗುವುದು

**10) ಬಾಲಕಾರ್ಮಿಕ ಪದ್ಧತಿ /ಹೆಣ್ಣು ಭ್ರೂಣ ಹತ್ಯೆ/ಬಾಲ್ಯ ವಿವಾಹಕ್ಕೆ ಕಾರಣಗಳಾವುವು?**
**ಉತ್ತರ:–** * ವಲಸೆ * ಶಿಕ್ಷಣ ಹಕ್ಕು ಕಾಯ್ದೆ ಅಸಮರ್ಪಕ ಅನುಷ್ಠಾನ
* ಕುಟುಂಬದ ಆರ್ಥಿಕ ಪರಿಸ್ಥಿತಿ * ವರದಕ್ಷಿಣೆ * ಬಡತನ
* ಅನಕ್ಷರತೆ * ಕೃಷಿ ಸಮಾಜದ ಬಿಕ್ಕಟ್ಟುಗಳು * ಲಿಂಗ ತಾರತಮ್ಯ
* ಪೋಷಕರ ದುಶ್ಚಟಗಳು

**11) ಸಂಘಟಿತ ಮತ್ತು ಅಸಂಘಟಿತ ವಲಯದ ಕೆಲಸಗಾರರ ನಡುವಿನ ವ್ಯತ್ಯಾಸ ತಿಳಿಸಿರಿ.**
**ಉತ್ತರ:–** * ಸಂಘಟಿತ ದುಡಿಮೆಗಾರರು * ಕಾನೂನು ನಿಯಂತ್ರಣಕ್ಕೆ ಒಳಪಡುತ್ತಾರೆ * ನಿಗಧಿತ ವೇತನ ವಿರುತ್ತದೆ
* ಉದ್ಯೋಗದ ಭದ್ರತೆ ಇರುತ್ತದೆ * ಕೆಲಸದ ನಿಶ್ಚಿತ ನಿಯಮಗಳು ಇರುತ್ತವೆ * ವಿಶೇಷ ಸೌಲಭ್ಯಗಳು ಮತ್ತು ಭತ್ಯೆಗಳು * ಸರಕಾರಿ ನೌಕರರು, ಖಾಸಗಿ ಕಂಪನಿ * ಅಸಂಘಟಿತ ದುಡಿಮೆಗಾರರು
* ಕಾನೂನಿನ ನಿಯಂತ್ರಣಕ್ಕೆ ಒಳಪಡುವುದಿಲ್ಲ * ನಿಗದಿತ ವೇತನ ಇರುವುದಿಲ್ಲ * ಉದ್ಯೋಗದ ಭದ್ರತೆ ಇರುವುದಿಲ್ಲ * ಯಾವುದೇ ಕೆಲಸದ ನಿಯಮಗಳಿರುವುದಿಲ್ಲ * ವಿಶೇಷ ಸೌಲಭ್ಯ ಭತ್ಯೆಗಳಿರುವುದಿಲ್ಲ. * ವ್ಯಾಪಾರಿಗಳು, ಕಟ್ಟಡ ಕೆಲಸ ಕಾರ್ಮಿಕರು

**ನೆನಪಿನಲ್ಲಿಡಿ**

* "ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ"
  – ಮಹಾತ್ಮ ಗಾಂಧೀಜಿ
* "ಮಾನವ ಕುಲ ತಾನೊಂದೇ ವಲಂ".– ಆದಿ ಕವಿ ಪಂಪ
* ಅಸ್ಪೃಶ್ಯತೆ ಆಚರಣೆ ವಿರೋಧ –17 ನೇ ವಿಧಿ
* ಕೇಂದ್ರ ಸರ್ಕಾರ ಸಮಾನ ವೇತನ ಕಾಯ್ದೆ–1976
* ನರ್ಮದಾ ಬಚಾವೋ ಆಂದೋಲನ ನಡೆದ ರಾಜ್ಯ–ಗುಜರಾತ್
* ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ – 24 ನೇ ವಿಧಿ
* ಮಕ್ಕಳ ಸಹಾಯವಾಣಿ–1098

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ** ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ:9916567120

www.hampitimes.com - Hampi Times Margadarshi

ಸಾಯಿಮಣಿ ಪ್ರಕಾಶನ, ಹೊಸಪೇಟೆ

HAMPI TIMES VIJAYANAGARA
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...
ಹಂಪಿ ಟೈಮ್ಸ್ ಇ-ಪೇಪರ್
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

# ರಾಜೇಶ್, ಅನುರಾಧ ರಾಗಕ್ಕೆ ಪ್ರೇಕ್ಷಕರು ಫಿದಾ

## ಮನಮೋಹಕ ಕಂಠದಿಂದ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದ ಆರ್.ಕೆ, ತರುಣ್, ಸೋನಲ್

## ಹೃದಯಸ್ಪರ್ಶಿ ಹಾಡುಗಳ ಸುರಿಮಳೆ | ಶ್ರೋತೃಗಳ ಹೃದಯದಲ್ಲಿ ಭಾವನಾತ್ಮಕ ಬೆಸುಗೆ ಬೆಸೆದ ಗಾಯಕರು

■ ಹಂಪಿ ಟೈಮ್ಸ್ ಹೊಸಪೇಟೆ

2025ರ ಹಂಪಿ ಉತ್ಸವದ ಮೊದಲ ದಿನ ಎಂಪಿ ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಸಿನಿ ತಾರೆಯಾದ ನಟ ಅರವಿಂದ್‌ರಮೇಶ್, ನಟಿಯಾದ ಪ್ರೇಮ, ಪೂಜಾಗಾಂಧಿ ತಮ್ಮ ಸಿಹಿನುಡಿಗಳಿಂದ ಪ್ರಕ್ಷೇರ ಮನಗೆದ್ದರೆ, ಖ್ಯಾತ ಗಾಯಕರಾದ ರಾಜೇಶ್‌ಕೃಷ್ಣನ್, ತರುಣ್ ಸುಧೀರ್, ಸೋನಲ್ ಮೋಂಥೆರೋ, ಬೇಬಿ ಸಿಹಿ ಹಾಗೂ ಅನುರಾಧ ಭಟ್ ಅವರು ಸುಶ್ರಾವ್ಯ ಕಂಠದಿಂದ ಪ್ರೇಕ್ಷಕರನ್ನು ತಡೆರಾತ್ರಿಯಾದರೂ ನಿದ್ದೆಗೆ ಜಾರದಂತೆ, ತಮ್ಮ ಹಾಡಿಗೆ ಕಿವಿಯಾಗಿಸಿಕೊಂಡು, ಪ್ರೇಕ್ಷಕರ ಮನದಾಳಕ್ಕಿಳಿದು ಭಾವನಾತ್ಮಕ ಬೆಸುಗೆ ಬೆಸೆದರು.

ತುರುಣ್ ಸುದೀಪ್ ಮಾತನಾಡಿ, ನಾನು ಹುಟ್ಟಿದ್ದು ಹೊಸಪೇಟೆ ಸರ್ಕಾರಿ ಆಸ್ಪತ್ರೆಯಲ್ಲೆ. ಹಂಪಿ ಪುಣ್ಯಭೂಮಿ. ಕಲೆಗೆ ಪ್ರಾಮುಖ್ಯತೆ ನೀಡಿದ ನೆಲವಿದು. ಇಂತಹ ಅತ್ಯದ್ಭುತ ಕಾರ್ಯಕ್ರಮ ಆಯೋಜನೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರೇ ಡೈರಕ್ಟರ್ ಆಗಿದ್ದಾರೆ ಎಂದರು. ನಿನ್ನ ನೋಡಿ ಸುಮನ್ನೆಂಗಿರಲಿ..., ಹಾಡು ಹಾಡಿದರು. ರಾಜೇಶ್ ಕೃಷ್ಣನ್ ವೇದಿಕೆಗೆ ಎಂಟ್ರಿಯಾಗುತ್ತಿದ್ದಂತೆ ಯಾರೋ ಕಣ್ಣಲ್ಲಿ ಕಣ್ಣನಿಟ್ಟು, ಮನಸಿನಲ್ಲಿ ಮನಸನಿಟ್ಟು ನನ್ನ ಒಳಗಿಂದಲೇ ನನ್ನ ಕದ್ದರಾರೋ ಗಾಯನಕ್ಕೆ ಪ್ರೇಕ್ಷಕರು ಫಿದಾ ಆದರು. ರಾಜೇಶ್ ಗಾಯನಕ್ಕೆ ಹೆಜ್ಜೆ ಹಾಕಿ, ಮೊಬೈಲ್ ಟಾರ್ಚ್ ಬಿಟ್ಟು ಪ್ರೀತಿ ತೋರಿದರು. ಪ್ರೇಕ್ಷಕರ ಪ್ರೀತಿಗೂ ಮನಸೋತು ಉಸಿರೆ... ಉಸಿರೇ ಸೇರಿದಂತೆ ಹಲವು ಹಾಡು ಹಾಡಿದರು.






ಚಿತ್ರಗಳು: ಕೆ.ಎಂ.ಕೊಟ್ರೇಶ್

# ಕಲ್ಪನಾ ಲೋಕಕ್ಕಿಂತ ಜನರ ಸಮಸ್ಯೆಗಳಿಗೆ ಧ್ವನಿಯಾಗಬೇಕು

## ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಸಲಹೆ

■ ಹಂಪಿ ಟೈಮ್ಸ್ ಹೊಸಪೇಟೆ

ಕವಿಗಳಾದವರು ಕಲ್ಪನಾ ಲೋಕದಲ್ಲಿ ಇರದೆ ತಮ್ಮ ಕವನಗಳಲ್ಲಿ ಇಂದಿನ ಕಾಲಕ್ಕೆ ಅಗತ್ಯವಾದ ಜನರ ವಾಸ್ತವ ಸಮಸ್ಯೆಗಳ ಧ್ವನಿಯಾಗಬೇಕು ಎಂದು ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಸಲಹೆ ನೀಡಿದರು.

ಶನಿವಾರ ಹಂಪಿ ಉತ್ಸವ– 2025 ರ ಅಂಗವಾಗಿ ಶ್ರೀ ವಿರೂಪಾಕ್ಷೇಶ್ವರ ದೇವಾಲಯ ವೇದಿಕೆಯಲ್ಲಿ ಹಮ್ಮಿಕೊಂಡಿದ್ದ ಕವಿಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪಂಪ, ಕುವೆಂಪು, ರನ್ನ, ದಾಸರು ಇಂದಿಗೂ ನಮಗೆ ಪ್ರಸ್ತುತವಾಗುವುದು ಅವರ ಕಾವ್ಯದಲ್ಲಿರುವ ಅಂತಃಸತ್ವದಿಂದಾಗಿದೆ. ಶರಣರು, ದಾಸರು ತೀರ್ಥ ಕ್ಷೇತ್ರಗಳನ್ನು ಒಪ್ಪಲಿಲ್ಲ, ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂದು ಪ್ರತಿಪಾದಿಸಿದರು ಎಂದು ತಿಳಿಸಿದರು.

ಕವಿಗೋಷ್ಠಿಗಳಲ್ಲಿಶಾಲಾ–ಕಾಲೇಜುಗಳವಿದ್ಯಾರ್ಥಿಗಳುಭಾಗವಹಿಸುವಂತಾಗಬೇಕು. ಕವಿಯಾದವರಿಗೆ ಆಳವಾದ ಅಧ್ಯಯನದ ಅವಶ್ಯಕತೆಯಿದೆ. ಮೈಸೂರು ದಸರಾ ಮಾದರಿಯಲ್ಲಿ ಹಂಪಿ ಉತ್ಸವದಲ್ಲಿಯೂ ಕವಿಗೋಷ್ಠಿಗಳ ಪುಸ್ತಕ ಬಿಡಗಡೆ ಮಾಡಬೇಕು ಎಂದರು.

ಜಿಲ್ಲಾಧಿಕಾರಿ ಎಂ. ಎಸ್. ದಿವಾಕರ್ ಮಾತನಾಡಿ, ನಮ್ಮ ಭಾಗದಲ್ಲಿ ಹಲವಾರು ಕವಿ ಹಾಗೂ ಕವಿಯತ್ರಿಯರು ಇದ್ದಾರೆ. ಕೆಲವರಿಗೆ ಮಾತ್ರ ಕವಿತೆಗಳನ್ನು ಬರೆಯುವ ಶಕ್ತಿ ಇರುತ್ತದೆ ಅವರು ಸಮಾಜದ ಹಲವಾರು ಒಳಿತು ಕೆಡಕುಗಳನ್ನು ತಮ್ಮ ಕವಿತೆಗಳ ಮೂಲಕ ವ್ಯಕ್ತಪಡಿಸುವ ಶಕ್ತಿ ಹೊಂದಿದ್ದಾರೆ ಎಂದು ಹೇಳಿದರು.

ಜಿಪಂ ಸಿಇಒ ಎನ್.ಎಂ. ಅಲಿ ಅಕ್ರಮ್ ಷಾ, ಸಾಹಿತಿ ರಮೇಶ ಗಬ್ಬೂರ್ ಮಾತನಾಡಿದರು. ಕಲಾವಿದರಾದ ಮ. ಬ. ಸೋಮಣ್ಣ ಅವರು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಅಖಂಡ ಬಳ್ಳಾರಿ ಕಸಾಪ ನಿಕಟಪೂರ್ವ ಅಧ್ಯಕ್ಷ ಸಿದ್ದರಾಮ ಕಲ್ಮಠ. ಸಾಹಿತಿಗಳಾದ ಸೋ. ದಾ. ವಿರೂಪಾಕ್ಷಗೌಡ. ಡಾ. ವೀರೇಶ ಉತ್ತಂಗಿ. ಪ್ರಾಚಾರ್ಯರಾದ ನಾಗರಾಜ್ ಹವಾಲ್ದಾರ್. ಜಿ. ಕೊಟ್ರೇಶ ಸೇರಿದಂತೆ ಕವಿ ಹಾಗೂ ಸಾಹಿತಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಹಂಪಿ ಬೈ ಸ್ಕೈಗೆ ಶಾಸಕ ಹೆಚ್.ಆರ್.ಗವಿಯಪ್ಪ ಚಾಲನೆ

■ ಹಂಪಿ ಟೈಮ್ಸ್ ಹೊಸಪೇಟೆ

ಹಂಪಿ ಉತ್ಸವದ ನಿಮಿತ್ತ ಜಿಲ್ಲಾಡಳಿತ ಮತ್ತು ಪ್ರವಾಸೋದ್ಯಮ ಇಲಾಖೆ ವತಿಯಿಂದ ಕಮಲಾಪುರದ ಹೋಟೆಲ್ ಮಯೂರ ಭುವನೇಶ್ವರಿ ಆವರಣದಲ್ಲಿ ಆಯೋಜಿಸಲಾಗಿದ್ದ ಹಂಪಿ ಬೈ ಸ್ಕೈಗೆ ಶಾಸಕ ಹೆಚ್.ಆರ್.ಗವಿಯಪ್ಪ ತಾಯಿ ಭುವನೇಶ್ವರಿ ದೇವಿಗೆ ಪೂಜೆ ಸಲ್ಲಿಸಿ ಶನಿವಾರ ಚಾಲನೆ ನೀಡಿ, ಹೆಲಿಕಾಪ್ಟರ್‌ನಲ್ಲಿ ಸ್ಮಾರಕಗಳ ವೀಕ್ಷಣೆ ಮಾಡಿದರು.

ಆಗಸದಿಂದ ಹಂಪಿ ಸ್ಮಾರಕಗಳನ್ನು ನೋಡಿ ಅದರ ಅನುಭವ ಪಡೆದುಕೊಳ್ಳಬೇಕು ಎಂದರು. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿ, ಹಂಪಿಯನ್ನು ಆಗಸದಿಂದ ನೋಡಿದರೆ ಮಾತ್ರ ಆಹ್ಲಾದಕರ ಅನುಭವ ಸಿಗುತ್ತದೆ. ಮೂರು ದಿನಗಳ ಕಾಲ ಬೆಳಿಗ್ಗೆ:09 ರಿಂದ ಸಂಜೆ:05.30 ರವರೆಗೆ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದರು.

**ಶುಲ್ಕ ಪಾವತಿಯ ವಿವರ:** ಒಬ್ಬರಿಗೆ ರೂ.3999/– ನಿಗದಿಪಡಿಸಲಾಗಿದೆ . 02 ವರ್ಷದೊಳಗಿನ ಮಕ್ಕಳಿಗೆ ಯಾವುದೇ ಶುಲ್ಕವಿರುವುದಿಲ್ಲ. ನೋಂದಣಿಗಾಗಿ: ಮೊ.9400399999, ಮೊ.9743334888, 99428 82473 ಗೆ ಸಂಪರ್ಕಿಸಬಹುದು ಎಂದು ತಿಳಿಸಿದರು. ಹಡಗಲಿ ಶಾಸಕ ಕೃಷ್ಣನಾಯ್ಕ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ, ಸಿಬ್ಬಂದಿ ಶ್ರೀಹರಿ ಸೇರಿದಂತೆ ಇತರರು ಇದ್ದರು.

# ಹಂಪಿ ಗಂಡುಮೆಟ್ಟಿದ ನೆಲ

ಮೊದಲ ಪುಟದಿಂದ

ದತ್ತು ಪಡೆಯುವ ಮೂಲಕ ಸ್ಮಾರಕಗಳ ಮಾಡಲಾಗುತ್ತಿದೆ. ಇಂದು ಮೂರು ಲಕ್ಷಿಕ್ಕಿಂತ ಹೆಚ್ಚು ಜನರು ಸೇರಿದ್ದಾರೆ. ಇದರಿಂದ ನಮಗೆ ತುಂಭಾ ಸಂತೋಷವಾಗುತ್ತಿದೆ. ಈ ಕಾರ್ಯಕ್ರಮ ಏರ್ಪಾಡು ಮಾಡುವಲ್ಲಿ ಬಹಳ ಜನರ ಪಾತ್ರವಿದೆ. ಜನ ಸಾಗರದಂತೆ ಹರಿದು ಬಂದಿದ್ದಾರೆ. ನಾವು ನೀಡಿದ ಎಲ್ಲಾ ಸೂಚನೆಗಳನ್ನು ಅಧಿಕಾರಿಗಳು ಪಾಲನೆ ಮಾಡಿದ್ದಾರೆ ಎಂದರು.

ಹಂಪಿಗೆ ಬರುವವರು ಲಕ್ಕುಂಡಿ. ಬದಾಮಿ. ವಿಜಯಪುರಕ್ಕು ಹೋಗಬೇಕು. ಉತ್ತರ ಕರ್ನಾಟಕ ಭವ್ಯ ಪರಂಪರೆಯ ನಾಡಾಗಿದೆ. ದೊಡ್ಡ ಕೆಲಸ ಆದಾಗ ಯಾರು ಮಾಡಿದರು ನೆನೆಯುತ್ತೆವೆ ಎಂದು ಹೇಳಿದರು.

ವಿಜಯನಗರ ಕ್ಷೇತ್ರದ ಶಾಸಕರಾದ ಹೆಚ್. ಆರ್. ಗವಿಯಪ್ಪ ಅಧ್ಯಕ್ಷತೆವಹಿಸಿ ಮಾತನಾಡಿ ಹಂಪಿ ಉತ್ಸವದಲ್ಲಿ ನಿನ್ನೆಗಿಂತ ಇಂದು ಹೆಚ್ಚಿನ



ಜನರು ಬಂದಿದ್ದಾರೆ. ಹೀಗೆ ಉತ್ಸವ ನಡಿತಾ ಇರಬೇಕು. ಪ್ರವಾಸೋದ್ಯಮ ಸಚಿವರು ಹಂಪಿಯ ಮೇಲೆ ಹೆಚ್ಚಿನ ಗಮನಕೊಡಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಎಂ. ಎಸ್. ದಿವಾಕರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಹಂಪಿ ಉತ್ಸವ ಈ ವರ್ಷ ವಿಭಿನ್ನವಾಗಿ ಆಚರಣೆ ಮಾಡುತ್ತಿದ್ದೆವೆ. ಹಂಪಿಯ ಮಹಾನವಮಿ ದಿಬ್ಬದ ಸ್ಪೂರ್ತಿಯೆ ಮೈಸೂರು ದಸರಾ ಆಗಿದೆ. ಇತರೆ 5 ಸ್ಟೇಜಗಳನ್ನು ಮಾಡಲಾಗಿದೆ. ಶೇ. 80 ಪ್ರತಿಶತ ಸ್ಥಳೀಯ ಕಲಾವಿದರಿಗೆ ಈ ಉತ್ಸವದಲ್ಲಿ ಅವಕಾಶ ನೀಡಲಾಗಿದೆ. ಉತ್ಸವದಲ್ಲಿ ದೂಳು ಬರದಂತೆ ಸಂಪೂರ್ಣ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಗಳೂರು ಕ್ಷೇತ್ರದ ಶಾಸಕರಾದ ಬಿ. ದೇವೇಂದ್ರಪ್ಪ. ಕೂಡ್ಲಿಗಿ ಕ್ಷೇತ್ರದ ಶಾಸಕರಾದ ಎನ್.ಟಿ. ಶ್ರೀ ನಿವಾಸ. ಹೊಸಪೇಟೆ ನಗರಸಭೆ ಅಧ್ಯಕ್ಷರಾದ ರೂಪೇಶ ಕುಮಾರ್. ಹಂಪಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ರಜನಿ ಷಣ್ಮುಖಪ್ಪಗೌಡ.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಗ್ಹಾಯ್ ಮೋಹ್ಮದ್ ಅಲಿ ಅಕ್ರಮ್ ಷಾ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಹರಿ ಬಾಬು ಬಿ. ಎಲ್. ಸೇರಿದಂತೆ ಇತರೆ ಹಲವಾರು ಜನರು ಉಪಸ್ಥಿತರಿದ್ದರು.

# ಪ್ರೇಕ್ಷಕರನ್ನು ರಂಜಿಸಿದ ಸಿನಿ ತಾರೆಯರ ಬಳಗ




ಹಂಪಿ ಉತ್ಸವದ ಎರಡನೇ ದಿನ ಶನಿವಾರ ಎಂಪಿ ಪ್ರಕಾಶ ಪ್ರಧಾನ ವೇದಿಕೆಯಲ್ಲಿ ನಟರಾದ ವಶಿಷ್ಠಸಿಂಹ, ಪ್ರಿಯಾಂಕ ಉಪೇಂದ್ರ, ವಿಜಯ ರಾಘವೇಂದ್ರ, ಅನುಪ್ರಭಾಕರ್ ಹಾಗೂ ಐಶ್ವರ್ಯ ಹಂಪಿ ನೆಲದ ಮಹಿಮೆಯನ್ನು ಅಭಿಮಾನದೊಂದಿಗೆ ವ್ಯಕ್ತಪಡಿಸಿದರು. ಅಪಾರ ಸಂಖ್ಯೆಯಲ್ಲಿ ವೇದಿಕೆ ಎದುರು ಮನರಂಜನೆಗಾಗಿ ಕಾದುಕುಳಿತಿದ್ದ ಪ್ರೇಕ್ಷರಿಗೆ ಗೀತಗಾಯನದ ಮೂಲಕ ರಂಜಿಸಿದರು. ಪ್ರೇಕ್ಷಕರು ಚಪ್ಪಾಳೆ, ಸಿಳ್ಳೆ ಮೂಲಕ ಅಭಿನಂದನೆ ಸಲ್ಲಿಸಿದರು.

# ಹಂಪಿ ಉತ್ಸವದಲ್ಲಿ ಯೋಗಾಯೋಗ

## ಯೋಗಗುರು ವಚನಾನಂದ ಸ್ವಾಮಿಜಿ ಹೇಳಿಕೆ | ಯೋಗಾಭ್ಯಾಸ ಸಾರ್ವಜನಿಕರ ಸ್ವತ್ತು, ಅಭ್ಯಾಸದಿಂದ ಆರೋಗ್ಯ ವೃದ್ಧಿ



■ ಹಂಪಿ ಟೈಮ್ಸ್ ಹೊಸಪೇಟೆ

ಸ್ವಾಮೀಜಿಗಳು, ಯೋಗಿಗಳು ಸೇರಿದಂತೆ ಕೆಲವರ ಸ್ವತ್ತಾಗಿದ್ದ ಯೋಗಾಭ್ಯಾಸವನ್ನು ಸಾರ್ವಜನಿಕರ ಸ್ವತ್ತಾಗಿ ರೂಪಿಸಿದ ಕೀರ್ತಿ ಯೋಗ ಗುರು ಬಾಬಾ ರಾಮದೇವ ಅವರಿಗೆ ಸಲ್ಲುತ್ತದೆ ಎಂದು ಹರಿಹರ ಪಂಚಮಸಾಲಿ ಪೀಠಾಧಿಪತಿ ಹಾಗೂ ಯೋಗಗುರು ವಚನಾನಂದ ಸ್ವಾಮಿಜಿ ಹೇಳಿದರು.

ವಿಜಯನಗರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ ವತಿಯಿಂದ ಹಂಪಿ ಉತ್ಸವದ ಪ್ರಯುಕ್ತ ವಿಜಯ ವಿಠಲ ದೇವಾಲಯ ಆವರಣದಲ್ಲಿ ಶನಿವಾರ ಬೆಳಿಗ್ಗೆ ಹಮ್ಮಿಕೊಂಡಿದ್ದ ಸಾಮೂಹಿಕ ಯೋಗಾಸನ ದಲ್ಲಿ ಮಾತನಾಡಿದರು. ಯೋಗದ ಮಹತ್ವ, ಯೋಗ ಮಾಡುವ ವಿಧಾನ ಸೇರಿದಂತೆ ಅದರಿಂದಾಗುವ ಪ್ರಯೋಜನಗಳ ಕುರಿತು ಮಾಹಿತಿಯೊಂದಿಗೆ ಅಭ್ಯಾಸ ಮಾಡಿಸಿದರು. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಮೊದಲ ಬಾರಿ ಯೋಗ ನಡೆಯಲು ಚಾಲನೆ ನೀಡಿರುವುದು ಸಾಧನೆಯಾಗಿದೆ. ಪ್ರಮುಖ ಕಾರ್ಯಕ್ರಮ ವಾಗಿ ರೂಪುಗೊಳಬೇಕು ಎಂದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿ, ಮನಸ್ಸು ಹಾಗೂ ದೇಹ ನಿಗ್ರಹಿಸಲು ಮಾಡುವ ದಂಡನೆ ಯೋಗವಾಗಿದೆ. ಯೋಗ ನಮ್ಮ ಜೀವನದ ಭಾಗ ಹಾಗೂ ನಿತ್ಯ ಕ್ರಿಯೆ ಯಾಗಬೇಕು ಎಂದರು.

ಪತಂಜಲಿ ಯೋಗಪೀಠ ಭವರ್ ಲಾಲ್ ಆರ್ಯ, ಆಯುಷ್ ಇಲಾಖೆಯ ಡಾ. ಸರಳಾ, ಪತಂಜಲಿ ಯೋಗಸಾಧಕರು, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿದ್ಯಾಲಯದ ಸಾಧಕರು ಸೇರಿದಂತೆ ನೂರಾರು ಯೋಗಾಸಕ್ತರು ಯೋಗಾಭ್ಯಾಸ ದಲ್ಲಿ ಪಾಲ್ಗೊಂಡಿದ್ದರು.